ಖಾಸಗಿ ಪ್ರಸಾರ



# ಶ್ರೀದೇವಿ ಅಂತರಂಗ

ಸೇವೆ - ಶಿಕ್ಷಣ - ಅಧ್ಯಾತ್ಮದ ಜೊತೆಗೆ ಪಯಣ

ಮಾಸಪತ್ರಿಕೆ
ಸಂಪುಟ 1, ಸಂಚಿಕೆ 1
ನವೆಂಬರ್ 2022

SHRIDEVI ANTARANGA
Monthly Magazine

SHRIDEVI EDUCATION





## ಪ್ರಧಾನ ಸಂಪಾದಕರ ಅಂತರಂಗ

**ಡಾ. ಎಂ.ಆರ್. ಹುಲಿನಾಯ್ಕರ್**
ಸಂಸ್ಥಾಪಕ ಅಧ್ಯಕ್ಷರು
ಶೀದೇವಿ ಶಿಕ್ಷಣ ಸಂಸ್ಥೆಗಳ ಸುಮೂಹ

ಇತ್ತೀಚಿಗೆ ದಿನಪತ್ರಿಕೆಗಳನ್ನು ಓದುವಾಗ ಎರಡು ಘಟನೆಗಳು ನನ್ನ ಮನಸ್ಸನ್ನು ಕಲಕಿದವು. ಅದನ್ನು ತಮ್ಮೊಡನೆ ಹಂಚಿಕೊಳ್ಳಲು ಬಯಸುತ್ತೇನೆ. ಮೊದಲನೆಯ ಘಟನೆ ನಮ್ಮ ತುಮಕೂರು ಜಿಲ್ಲೆಯ ಗುಬ್ಬಿ ತಾಲ್ಲೂಕಿನ ನಿಟ್ಟೂರು ಗ್ರಾಮಕ್ಕೆ ಸಂಬಂಧಪಟ್ಟಿದ್ದು. ನವೆಂಬರ್‌ನಲ್ಲೇ ನಡೆದ ಘಟನೆ. ಮತ್ತೊಂದು ನವೆಂಬರ್ ಎರಡನೆಯ ವಾರದಲ್ಲಿ ಚಾಮರಾಜನಗರ ತಾಲ್ಲೂಕಿನ ಹೆಗ್ಗೋತಾರ ಗ್ರಾಮಕ್ಕೆ ಸಂಬಂಧಿಸಿದ ಘಟನೆ. ಎರಡೂ ಒಂದೇ ಸ್ವರೂಪದಲ್ಲಿರುವುದು. ಮೊದಲನೆಯದರಲ್ಲಿ ಪರಿಶಿಷ್ಟ ಜಾತಿಯ ಕುಟುಂಬಕ್ಕೆ ದೇವಸ್ಥಾನದಲ್ಲಿ ಪೂಜಾ ಕಾರ್ಯಗಳನ್ನು ಮಾಡಿಕೊಡಲು ನಿರಾಕರಿಸಲಾಗಿದೆ. ಎರಡನೆಯದರಲ್ಲಿ ಪರಿಶಿಷ್ಟ ಜಾತಿಯವರು ದೇವಸ್ಥಾನ ಹೊಕ್ಕ ನಂತರ ಗೋಮೂತ್ರದಿಂದ ದೇವಸ್ಥಾನವನ್ನು ಶುದ್ಧೀಕರಿಸಲಾಗಿದೆ. ಈ ಪ್ರಸಂಗಗಳನ್ನು ಓದಿದ ನಂತರ ನಾನು ಸಾಕಷ್ಟು ಮಾನಸಿಕ ಹಿಂಸೆ ಅನುಭವಿಸಿದೆ. ನಾವೆಲ್ಲಿದ್ದೇವೆ? ಯಾವ ಕಾಲದಲ್ಲಿ ಜೀವಿಸುತ್ತಿದ್ದೇವೆ?

ಸನ್ಮಾನ್ಯ ಪ್ರಧಾನಿ ನರೇಂದ್ರ ಮೋದಿ ಅವರು 'ಸಬ್ ಕಾ ಸಾತ್, ಸಬ್ ಕಾ ವಿಕಾಸ್' ಎಂದು ಪ್ರತಿದಿನ ಹೇಳುತ್ತಾರೆ. ರಾಜ್ಯದಲ್ಲಿ ಆಡಳಿತ ನಡೆಸುತ್ತಿರುವ ಮಾನ್ಯ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಸರ್ಕಾರ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರ ಜನಸಂಖ್ಯೆಗೆ ಅನುಗುಣವಾಗಿ ಮೀಸಲಾತಿ ಪ್ರಮಾಣವನ್ನು ಹೆಚ್ಚಿಸಿದ್ದಾರೆ. ಇದೊಂದು ಕ್ರಾಂತಿಕಾರಿ ಕ್ರಮವೆಂದು ಎಲ್ಲರೂ ಹೊಗಳುತ್ತಿದ್ದಾರೆ. ಇಂತಹ ಸಂದರ್ಭದಲ್ಲಿ ಕೆಲವು ಪಟ್ಟಭದ್ರ ಹಿತಾಸಕ್ತಿಗಳು ಮಾಡುವ ಕೆಲಸದಿಂದ ಇಡೀ ಸಮಾಜ ತಲೆ ತಗ್ಗಿಸಿ ನಿಲ್ಲಬೇಕಾದ ಸ್ಥಿತಿ ನಿರ್ಮಾಣವಾಗಿದೆ.

ರಾಷ್ಟ್ರಪಿತ ಮಹಾತ್ಮ ಗಾಂಧೀಜಿ ಅವರು ತಮ್ಮ ಇಡೀ ಬದುಕನ್ನು ಅಸ್ಪೃಶ್ಯತೆಯ ವಿರುದ್ಧದ ಹೋರಾಟಕ್ಕೆ ಮೀಸಲಿಟ್ಟಿದ್ದರು. ಡಾ. ಬಿ.ಆರ್. ಅಂಬೇಡ್ಕರ್ ಸ್ವಾತಂತ್ರ್ಯ ಪೂರ್ವದಿಂದಲೂ ಈ ಅಸಹಾಯಕ ಜನರಿಗಾಗಿ ದಿಟ್ಟ ಹೋರಾಟವನ್ನೇ ಮಾಡಿಕೊಂಡು ಬಂದಿದ್ದರು. ಅಂತಿಮವಾಗಿ ಭಾರತದ ಸಂವಿಧಾನದಲ್ಲಿ ಈ ಸಮುದಾಯಕ್ಕೆ ನ್ಯಾಯ ಸಹ ದೊರಕಿಸಿಕೊಟ್ಟರು.

## ನೆನಪಿಸಿದ ಶರಣ ಪರಂಪರೆ



ಕರ್ನಾಟಕ ರಾಜ್ಯಕ್ಕೆ ಅಸ್ಪೃಶ್ಯತೆಯ ವಿರುದ್ಧ ಹೋರಾಟದಲ್ಲಿ ಎಂಟುನೂರು ವರ್ಷಗಳ ಇತಿಹಾಸವಿದೆ. ಕಾಯಕಯೋಗಿ ಬಸವಣ್ಣ ಅವರು ಯಾರು ಮಾಡದ ಕೆಲಸವನ್ನು ಮಾಡಿ ತೋರಿಸಿದ್ದಾರೆ. ತಮ್ಮನ್ನು ಡೋಹರ ಚೆನ್ನಯ್ಯನ ಮಗನೆಂದು ಕರೆದುಕೊಳ್ಳಲು ಅವರೇನೂ ಹಿಂಜರಿಯಲಿಲ್ಲ. ಇಡೀ ಶರಣರ ಚಳವಳಿಯ ಆಶಯವೇ ಸರ್ವ ಸಮಾನತೆಯ ಮೇಲೆ ಸಮಾಜ ಕಟ್ಟುವುದಾಗಿದೆ. ಅದು ಕೇವಲ ಮಾತಿನಲ್ಲಿ ನಡೆದ ಘಟನೆಯಲ್ಲ. ನನ್ನ ಬದುಕಿನಲ್ಲೇ ಅದನ್ನು ನೋಡಿದ್ದೇನೆ. ಇಂದಿಗೂ ಆ ಆಶಯ ನಮ್ಮ ಉತ್ತರ ಕರ್ನಾಟಕದ ಭಾಗದಲ್ಲಿದೆ. ಅದಕ್ಕೊಂದು ಉದಾಹರಣೆಯನ್ನು ನೋಡಬಹುದು. ನಮ್ಮೂರು ಧಾರವಾಡ ಜಿಲ್ಲೆ ನವಲುಗುಂದ ತಾಲ್ಲೂಕಿನ ತುಪ್ಪದಕುರಹಟ್ಟಿ. ನಾವೆಲ್ಲಾ ಕೃಷಿಕರು. ಜೊತೆಗೆ ಕುರಿ ಸಾಕುವಿಕೆಯನ್ನು ಮಾಡುತ್ತಾ ಬಂದಿದ್ದೇವೆ. ನಮ್ಮೂರು ಕಾಯಕಯೋಗಿ ಬಸವಣ್ಣನವರ ಆದರ್ಶವನ್ನು ಅನೇಕ ದೃಷ್ಟಾಂತಗಳ ಮೂಲಕ ಪಾಲಿಸುತ್ತಿತ್ತು. ಇಂದಿಗೂ ಅದರ ಪ್ರಭಾವ ಹಾಗೇ ಮುಂದುವರಿದಿದೆ. ನಮ್ಮೂರಿನಲ್ಲಿ ಬಹುದೊಡ್ಡ ಕೆರೆಯಿದೆ. ಇಡೀ ಊರಿಗೆ ಕುಡಿಯುವ ನೀರಿಗೆ ಈ ಕೆರೆನೀರು ಆಧಾರ, ಜೊತೆಗೆ ಬಾವಿಯಿತ್ತು. ನಮ್ಮೂರಿನ ಕೆರೆಯ ಉಸ್ತುವಾರಿಯನ್ನು ಪರಿಶಿಷ್ಟ ಜಾತಿಯ ಹೆಣ್ಣುಮಗಳೊಬ್ಬಳು ನೋಡಿಕೊಳ್ಳುತ್ತಿದ್ದಳು. ಅವರಿಗೆ ಗ್ರಾಮ ಪಂಚಾಯಿತಿ ಹೊಣೆಯನ್ನು ಅಧಿಕೃತವಾಗಿ ವಹಿಸಿತ್ತು. ಅವಳು ಕೆರೆಯನ್ನು ಸಂರಕ್ಷಿಸುತ್ತಿದ್ದಳು. ಊರಿನ ಬಾವಿಯಲ್ಲಿ ಎಲ್ಲರೂ ನೀರು ಸೇದುತ್ತಿದ್ದರು. ಹಳ್ಳಿಯಲ್ಲಿ ಯಾರಿಗೂ ಬೇಧ ಎಂಬುದು ಇರಲಿಲ್ಲ.

ತುಮಕೂರಿಗೂ ಅಂತಹ ಪರಂಪರೆಯಿದೆ. ಎಡೆಯೂರು ಸಿದ್ಧಲಿಂಗೇಶ್ವರರ ಆಶೀರ್ವಾದದಿಂದ ಬೆಳೆದ 'ಶ್ರೀ ಸಿದ್ಧಗಂಗಾ ಮಠ' ಶಿವಶರಣ ಪರಂಪರೆಯನ್ನು ನೆನಪಿಗೆ ತರುತ್ತದೆ. ಪರಮಪೂಜ್ಯ ಶ್ರೀ ಡಾ. ಶಿವಕುಮಾರ ಸ್ವಾಮೀಜಿ ಅವರು ಭಕ್ತಿಭಂಡಾರಿ ಬಸವಣ್ಣ ಅವರ 'ದಾಸೋಹ' ಕಾರ್ಯವನ್ನು ಸಮರ್ಥವಾಗಿ ಮುಂದುವರಿಸಿ, ಇಡೀ ರಾಷ್ಟ್ರದಲ್ಲಿ ಜನರು ಮತ್ತೇ ಬಸವಣ್ಣ ಅವರನ್ನು ನೆನೆಯುವಂತೆ ಮಾಡಿದ್ದಾರೆ. ಅವರ ದಾಸೋಹ ಕಾರ್ಯಕ್ರಮಕ್ಕೆ ಜಾತಿ, ಭಾಷೆ, ಪ್ರಾಂತ್ಯಗಳ ಬೇಧವಿಲ್ಲ ಎಂಬುದು ಎಲ್ಲರಿಗೂ ತಿಳಿದ ವಿಚಾರ. ಈ ಪರಂಪರೆಯನ್ನು ಈಗಿನ ಪೂಜ್ಯ ಶ್ರೀ ಸಿದ್ಧಲಿಂಗಸ್ವಾಮಿಗಳು ಮುಂದುವರಿಸಿಕೊಂಡು ಬರುತ್ತಿದ್ದಾರೆ.

ಭಾರತದಲ್ಲಿ ಅನ್ಯಧರ್ಮಗಳು ತಮ್ಮ ಪ್ರಾಬಲ್ಯವನ್ನು ಸಾಧಿಸಲು ನಮ್ಮ ಹಿಂದೂ ಧರ್ಮದಲ್ಲಿರುವ ಕೆಲವು ದೌರ್ಬಲ್ಯಗಳು ಕಾರಣ ಎಂದು ಸಮಾಜಸುಧಾರಕರು ಅನೇಕ ಸಲ ಹೇಳಿದ್ದಾರೆ. ಅದರಲ್ಲಿ ಅಸ್ಪೃಶ್ಯತೆ ಅತ್ಯಂತ ಮುಖ್ಯವಾದದ್ದು. ನಾನು ವೈದ್ಯನಾಗಿ ಐವತ್ತು ವರ್ಷ ಕೆಲಸ ಮಾಡಿದ್ದೇನೆ. ನಮಗೆ ಮನುಷ್ಯರ ರಕ್ತದಲ್ಲಿ ಬೇಧ ಕಾಣಿಸಿಲ್ಲ. ನಾವು ಎಲ್ಲರಿಗೂ ಅವರ ಕಾಯಿಲೆಗೆ ಅನುಗುಣವಾದ ಚಿಕಿತ್ಸೆ ನೀಡುತ್ತೇವೆಯೇ ಹೊರತು ಆತ ಯಾವ ಜಾತಿ ಅಥವಾ ಧರ್ಮದವನು ಎಂದು ಯೋಚಿಸುವುದೂ ಇಲ್ಲ. ಇಂತಹ ಪ್ರಜ್ಞೆ ಎಲ್ಲರಲ್ಲೂ ಬರುವ ಅಗತ್ಯವಿದೆ. ಈ ಬಗ್ಗೆ ಚಿಂತಕರಾಗಿದ್ದ ರಾಜಾಜಿ ಹೇಳಿದ ಮಾತು ನನಗೆ ಜ್ಞಾಪಕಕ್ಕೆ ಬರುತ್ತದೆ. 'ಅಸ್ಪೃಶ್ಯತೆ ಎಂಬುದು ಅಸ್ಪೃಶ್ಯರಿಗೆ ಅಂಟಿಕೊಂಡಿರುವ ಜಾಡ್ಯವಲ್ಲ, ಸ್ಪೃಶ್ಯರಿಗೆ ಹಿಡಿದಿರುವ ಜಾಡ್ಯ'.

ನಿರೂಪಣೆ: **ಕಮಲೇಶ್**

## ಶ್ರೀದೇವಿ ವಿಜ್ಞಾನ ಮಹಾವಿದ್ಯಾಲಯಕ್ಕೆ ಎರಡನೆಯ ರ್‍ಯಾಂಕ್

ತುಮಕೂರಿನ ಶಿರಾ ರಸ್ತೆಯ ಶ್ರೀದೇವಿ ಔಷಧ ವಿಜ್ಞಾನ ಮಹಾವಿದ್ಯಾಲಯ ಕಾಲೇಜಿನ ನವೆಂಬರ್ 2021–22 ನೇ ಸಾಲಿನ ರಾಜೀವ್ ಗಾಂಧಿ ಆರೋಗ್ಯ ವಿಶ್ವ ವಿದ್ಯಾಲಯದ ಪರೀಕ್ಷೆಗಳಲ್ಲಿ ಬಿ.ಫಾರ್ಮಸಿ ಕೋರ್ಸ್‌ನಲ್ಲಿ ಪ್ರಥಮ ಸೆಮಿಸ್ಟರ್ ವಿದ್ಯಾರ್ಥಿನಿಯಾದ ಕು.ನೇಹಾ ಬೇಗಂ ಅವರು ರಾಜ್ಯಕ್ಕೆ 2ನೇ ರ್‍ಯಾಂಕ್ ಪಡೆದಿದ್ದಾರೆ. ಇವರು ಶ್ರೀದೇವಿ ಔಷಧ ವಿಜ್ಞಾನ ಮಹಾವಿದ್ಯಾಲಯ ಕಾಲೇಜಿಗೆ ಕೀರ್ತಿ ತಂದಿದ್ದಾರೆ.

ಶ್ರೀದೇವಿ ಔಷಧ ವಿಜ್ಞಾನ ಮಹಾವಿದ್ಯಾಲಯದ ಪ್ರಾಂಶುಪಾಲರಾದ ಡಾ.ಬಿ.ಗೋಪಾಲಕೃಷ್ಣ ಅವರು ಈ ಸಂದರ್ಭದಲ್ಲಿ ಮಾತನಾಡಿ, "ಶ್ರೀದೇವಿ ಪ್ಯಾರಾ ಮೆಡಿಕಲ್, ಫಾರ್ಮಸಿ ವಿದ್ಯಾರ್ಥಿಗಳಿಗೆ ಉತ್ತಮ ಪ್ರಯೋಗಾಲಯಗಳು, ವಿದ್ಯಾರ್ಥಿಗಳಿಗೆ ಮತ್ತು ವಿದ್ಯಾರ್ಥಿನಿಯರಿಗೆ ಪತ್ಯೇಕ ಹಾಸ್ಟೆಲ್ ಸೌಲಭ್ಯವಿರುತ್ತದೆ. ಡಿಜಿಟಲ್ ಗ್ರಂಥಾಲಯ ಮತ್ತು ಸುಸಜ್ಜಿತ ಕೌಶಲ್ಯ ಪ್ರಯೋಗಾಲಯಗಳನ್ನು ಬಳಸಿಕೊಂಡು



ಉತ್ತಮ ತಂತ್ರಜ್ಞಾನ ತರಬೇತಿಗಳನ್ನು ನೀಡಲಾಗುತ್ತದೆ. ನಮ್ಮಲ್ಲಿ ವ್ಯಾಸಂಗ ಪಡೆದ ವಿದ್ಯಾರ್ಥಿಗಳು ದೇಶದ ವಿವಿಧ ಆಸ್ಪತೆಗಳಲ್ಲಿ ಕೆಲಸ ನಿರ್ವಹಿಸುತ್ತಿದ್ದಾರೆ. ಕೆಲವು ವಿದ್ಯಾರ್ಥಿಗಳು ಉನ್ನತ ವ್ಯಾಸಂಗಕ್ಕಾಗಿ ವಿದೇಶಕ್ಕೆ ತೆರಳಿದ್ದಾರೆ. ನಮ್ಮ ಸಂಸ್ಥೆಯು ಉತ್ತಮ ಶಿಕ್ಷಣ ನೀಡುವುದರ ಜೊತೆಗೆ ಸರ್ಕಾರದಿಂದ ಹಮ್ಮಿಕೊಳ್ಳುವ ಎಲ್ಲಾ ರಾಷ್ಟ್ರೀಯ ಆರೋಗ್ಯ ಕಾರ್ಯಕ್ರಮಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುತ್ತದೆ" ಎಂದು ತಿಳಿಸಿದರು.

ಈ ವಿದ್ಯಾರ್ಥಿನಿಗೆ ಶ್ರೀದೇವಿ ಚಾರಿಟಬಲ್ ಟ್ರಸ್ಟ್‌ನ ಅಧ್ಯಕ್ಷರಾದ ಡಾ. ಎಂ.ಆರ್. ಹುಲಿನಾಯ್ಕರ್ ಮತ್ತು ವೈದ್ಯಕೀಯ ನಿರ್ದೇಶಕರಾದ ಡಾ. ಎಂ ರಮಣ್ ಹುಲಿನಾಯ್ಕರ್ ಶುಭ ಹಾರೈಸಿದರು. ⌘

**ಪತ್ರಿಕೆಯ ಬಳಗ**

ಪ್ರದಾನ ಸಂಪಾದಕರು
**ಡಾ. ಎಂ. ಆರ್. ಹುಲಿನಾಯ್ಕರ್**

ಗೌರವ ಸಂಪಾದಕರು
**ಡಾ. ಕೆ.ಆರ್.ಕಮಲೇಶ**

ಕಾರ್ಯನಿರ್ವಾಹಕ ಸಂಪಾದಕರು
**ಡಾ. ರಮಣ ಎಂ. ಹುಲಿನಾಯ್ಕರ್**

ಸಂಪಾದಕರು
**ಅಂಬಿಕಾ ಎಂ. ಹುಲಿನಾಯ್ಕರ್**

ಸಂಯೋಜಕ ಸಂಪಾದಕರು
**ಎಂ.ಎಸ್.ಪಾಟೀಲ್**

ಸಲಹಾ ಸಂಪಾದಕರು
**ಎನ್.ಭಾರತಿ**

ಸಂಪಾದಕ ಮಂಡಲಿ
**ಡಾ. ಭವಾನಿ ಸ್ಟಾಲಿನ್**
**ಡಾ. ಮನೋನ್ಮಣಿ ಎಂ.ಎಚ್**
**ಡಾ. ಲಾವಣ್ಯ ರಮಣ**

ಸಹಾಯಕ ಸಂಪಾದಕರು: **ಎನ್. ಆನಂದ**

ಸಂಪಾದಕರ ವಾಣಿ



ಅಂಬಿಕಾ ಎಂ ಹುಲಿನಾಯ್ಕರ್
ಆಡಳಿತಾಧಿಕಾರಿ,
ಶ್ರೀದೇವಿ ಇಂಜಿನಿಯರಿಂಗ್ ಕಾಲೇಜು

## ಮಹಿಳೆ ಸರ್ವಮಾನ್ಯಳಾಗಬೇಕು

ಇಂದಿನ ದೇಶವು ಸ್ವಾತಂತ್ರ್ಯದ ಅಮೃತ ಮಹೋತ್ಸವ ಆಚರಿಸಿ ಹೊಸ ಪರ್ವದತ್ತ ಹೆಜ್ಜೆಯಿರಿಸುತ್ತಿದೆ. ಈವರೆಗೆ ಹತ್ತಾರು ಬಾಹ್ಯ ಹಾಗೂ ಆಂತರಿಕ ಸವಾಲುಗಳನ್ನು ಎದುರಿಸಿದ್ದಾಗಿದೆ. ದಿಟ್ಟ ದೃಷ್ಟಿಕೋನ ಹೊಂದಿರುವ ಪ್ರಧಾನಿ ಸನ್ಮಾನ್ಯ ಶ್ರೀ ನರೇಂದ್ರಮೋದಿ ಅವರು ದೇಶದ ಚುಕ್ಕಾಣಿ ಹಿಡಿದಿದ್ದಾರೆ. ವಸುಧೈವ ಕುಟುಂಬಕಂ (Vasudhaiva Kutumbakam) ಎಂಬ ಧ್ಯೇಯದಿಂದ ಇಡಿ ಜಗತ್ತು ಸಾಗಬೇಕೆಂಬ ಆಶಯ ಅವರಲ್ಲಿದೆ.

ಈ ನಡುವೆ ನಮ್ಮ 'ಶ್ರೀದೇವಿ' ಕುಟುಂಬದಲ್ಲಿ "ಅಂತರಂಗ"ದ ಕಮಲ ಅರಳಿದೆ. ಇದೊಂದು ಹೆಮ್ಮೆಯ ಸಂಗತಿ. ಪ್ರಧಾನಿ ಮೋದಿ ಅವರು ತಮ್ಮ ಭಾಷಣದಲ್ಲಿ ದೇಶಕ್ಕಾಗಿ ತ್ಯಾಗ ಮಾಡಿದ, ಮಾಡುತ್ತಿರುವ ಹೆಣ್ಣುಮಕ್ಕಳನ್ನು ಕೊಂಡಾಡಿದ್ದಾರೆ. ಇಂದಿನ ಅಭಿವೃದ್ಧಿಯಲ್ಲಿ ಮಹಿಳೆ ಏನನ್ನು ಅಪೇಕ್ಷಿಸದೆ ಬದಲಾವಣೆಯ ನೇತೃತ್ವವನ್ನು ವಹಿಸಿದ್ದಾಳೆ. ಆಕೆ ಸೇನೆಯಲ್ಲೂ ದೊಡ್ಡ ಪಾತ್ರ ವಹಿಸುತ್ತಿದ್ದಾಳೆ. ಅದು ನೌಕಾಪಡೆ, ವಾಯುಸೇನೆ, ಭೂಸೇನೆ ಆಗಿರಲಿ ಭಾರತೀಯ ಮಹಿಳೆಗೆ ಸ್ಥಾನವಿದೆ. ಎಂಬತ್ತರ ದಶಕದಲ್ಲಿ 'ಓಟದ ರಾಣಿ' ಎಂದು ಖ್ಯಾತರಾಗಿದ್ದ ಪಿ.ಟಿ.ಉಷಾ ಅವರನ್ನು Indian Olympic Associationನ ಅಧ್ಯಕ್ಷರನ್ನಾಗಿ ಅವಿರೋಧವಾಗಿ ಆಯ್ಕೆ ಮಾಡಲಾಗಿದೆ. ಎಲ್ಲೆಡೆಯು ಹೆಣ್ಣು ಮಕ್ಕಳ ಪಾತ್ರ ಹೆಚ್ಚಾಗಿದೆ. ರಾಜಕೀಯ, ಸಾಮಾಜಿಕ, ಆರೋಗ್ಯ, ಕ್ರೀಡೆ, ಶಿಕ್ಷಣ ಮುಂತಾದ ಕ್ಷೇತ್ರದಲ್ಲಿ ಮಹಿಳೆ ವಿಶೇಷವಾದ ಪಾತ್ರ ವಹಿಸುತ್ತಿರುವುದನ್ನು ನೀವು ಸಹ ನೋಡುತ್ತಿರಬಹುದು.



ಮಹಿಳೆ ಸಮಾನತೆಗಾಗಿ ಮಾಡುವ ಹೋರಾಟದ ದಿನಗಳು ಕಳೆದಿವೆ. ಈಗಿನ ಹೋರಾಟ ಮಹಿಳೆ ಸಮ್ಮಾನತೆ ಪಡೆಯಲು ದುಡಿಯಬೇಕಾಗಿದೆ. ಸಮಾನತೆಯ ಮೀಸಲಾತಿಯ ಮೂಲಕವೂ ಸಿಗಬಹುದು. ಆದರೆ ಸಮ್ಮಾನತೆ ದೊರೆಯಬೇಕಾದರೆ ನಮ್ಮ ಪಾಲ್ಗೊಳ್ಳುವಿಕೆ ಬಹಳ ಮುಖ್ಯ. ಇದರಲ್ಲಿ ವ್ಯಕ್ತಿಯ ಆಸಕ್ತಿ ಮತ್ತು ದುಡಿಮೆ ಗಣನೆಗೆ ಬರುತ್ತದೆ. ಪಾಲ್ಗೊಳ್ಳುವಿಕೆಗೆ ಯಾರ ಅನುಮತಿ ಅಥವಾ ಅಪ್ಪಣೆಯ ಅವಶ್ಯಕತೆ ಇಲ್ಲ. ಇದಕ್ಕೆ ನಮ್ಮ ಅಂತರಂಗದ ಮಾತು ಸಾಕು. ಸಕ್ರಿಯವಾಗಿ ಪಾಲ್ಗೊಳ್ಳುವುದು ಹಾಗೂ ಅದನ್ನು ನಿರಂತರವಾಗಿ ಪಾಲನೆ ಮಾಡಿಕೊಂಡು ಬರುವುದು ಬಹಳ ಕಠಿಣ.

ಬಹಿರಂಗವಾಗಿ ಜನರು ತಮ್ಮ ಗಂಟಲು ಹರಿಯುವಷ್ಟು ಕೂಗುವ ನಾಯಕರಿಗೆ ಅಂತರಂಗದಲ್ಲಿ ಅವರು ಕೂಗಿಕೊಂಡ ವಿಷಯದಲ್ಲಿ ಬದ್ಧತೆಯಿರುತ್ತದೆಯೇ? ಸಾಮಾನ್ಯ ಜನರಿಗೂ ಸತ್ಯ ಗೊತ್ತಿರುವ ಕಾರಣ ಮನದಲ್ಲಿ ಅವರಿಗೆ ಶಾಪ ಹಾಕುತ್ತಾರೆ. ಶಿವಶರಣರು ಹೇಳುವಂತೆ ಅಂತರಂಗ ಬಹಿರಂಗಗಳೆರಡು ಒಂದಾದಾಗ ಮಾತ್ರ ಪೂರ್ಣಫಲ ದೊರೆಯುತ್ತದೆ. ಇದರ ಸಂಗಮವನ್ನೇ 'ಸಮ್ಮಾನತೆ' ಎನ್ನುವುದು. ಇದನ್ನು ಸಾಧಿಸಿದಾಗ ಸಹಜವಾಗಿ ಗುರಿಮಟ್ಟಲು ಸಾಧ್ಯವಾಗುತ್ತದೆ. ನೀವು ಗುರಿ ಮುಟ್ಟಿದಾಗ ಎಲ್ಲರಿಂದಲೂ ದೊರೆಯುವ ಪ್ರಶಂಸೆಯನ್ನು 'ಸರ್ವಮಾನ್ಯತೆ' ಎನ್ನಬಹುದು.

ಮಾನವನಿಗೆ ಜ್ಞಾನಕ್ಕೆ ತಲೆ, ಭಾವಕ್ಕೆ ಎದೆ, ಕ್ರಿಯೆಗೆ ಕೈಗಳು ಬಹುಮುಖ್ಯ ಅಂಗಗಳು ಎಂದು ಹೇಳಲಾಗಿದೆ. ಅದೇ ರೀತಿ ನಾಗರಿಕ ಸಮಾಜಕ್ಕೆ ಬುದ್ಧಿವಂತರು, ಹೃದಯವಂತರು ಮತ್ತು ಶಕ್ತಿವಂತರ ಅಗತ್ಯವಿರುತ್ತದೆ. ಜ್ಞಾನದ ಕಡೆ ಕಣ್ಣು, ಪ್ರೀತಿಯೆಡೆಗೆ ಹೃದಯ ಮತ್ತು ದುಡಿಯುವ ಕೈಗಳಿರಬೇಕು. ಆಗ ಮಾತ್ರ ಆದರ್ಶ ಸಮಾಜ ನಿರ್ಮಿಸಬಹುದು. ಸಮಾಜ ಮತ್ತು ವ್ಯಕ್ತಿ ನಡುವೆ ಅವಿನಾಭಾವ ಸಂಬಂಧವಿದೆ. ಸಮಾಜವನ್ನು ಬಿಟ್ಟು ವ್ಯಕ್ತಿ ಇರಲಾರ ಹಾಗೇ ವ್ಯಕ್ತಿ ಇಲ್ಲದೆ ಸಮಾಜವು ಇರುವುದಿಲ್ಲ. ಆದರ್ಶ ಸಮಾಜದ ಸಹಾಯದಿಂದಲೇ ವ್ಯಕ್ತಿತ್ವ ರೂಪುಗೊಳ್ಳುತ್ತದೆ. ವ್ಯಕ್ತಿಯ ಶರೀರ, ಮನಸ್ಸು, ಬುದ್ಧಿ, ಭಾವ ಈ ಎಲ್ಲಾ ಸ್ತರಗಳಲ್ಲೂ, ಅದರಲ್ಲೂ ಹೆಚ್ಚಾಗಿ ಆಧ್ಯಾತ್ಮಿಕ ಸ್ತರದಲ್ಲಿ ಸ್ವಾಸ್ಥ್ಯವಾಗಿರುವುದು ತುಂಬ ಮಹತ್ವದ್ದಾಗಿರುತ್ತದೆ. ಈ ರೀತಿಯ ಸ್ವಾಸ್ಥ್ಯ ಶಿಕ್ಷಣದ ತಿಳುವಳಿಕೆಯಿಂದಲೇ ದೊರೆಯಬೇಕು. ಸಮಾಜದಲ್ಲಿ ಇಂತಹ ಅರಿವು ಮೂಡಿಸುವಲ್ಲಿ ಮಹಿಳೆಯ ಪಾತ್ರ ಹೆಚ್ಚಿನದು.

"ಶ್ರೀದೇವಿ ಅಂತರಂಗ" ಮಾಸಿಕ ಪತ್ರಿಕೆಯ ಮುಖ್ಯ ಉದ್ದೇಶ ಪ್ರತಿಯೊಬ್ಬ ವ್ಯಕ್ತಿಯನ್ನು ಪರಿಪೂರ್ಣ ಸ್ವಾಸ್ಥ್ಯದ ಕಡೆಗೆ ಕರೆದುಕೊಂಡು ಹೋಗುವುದಾಗಿದೆ. ವ್ಯಕ್ತಿಯ ಶಾರೀರಿಕ, ಮಾನಸಿಕ, ಭಾವನಾತ್ಮಕ, ಬೌದ್ಧಿಕ, ಆರ್ಥಿಕ, ಸಾಮಾಜಿಕ, ಆಧ್ಯಾತ್ಮಿಕ ವಿಕಾಸದ ಕಡೆಗಿನ ಯಾತ್ರೆಯು ನಮ್ಮ ಗುರಿಯಾಗಿದೆ. ವ್ಯಕ್ತಿಯಿಂದ ಕುಟುಂಬ, ಕುಟುಂಬದಿಂದ ಸಮಾಜ, ಸಮಾಜದಿಂದ ರಾಷ್ಟ್ರ, ರಾಷ್ಟ್ರದಿಂದ ವಿಶ್ವಮಾನವತೆಯ ಕಡೆ ಎಲ್ಲರ ಜೀವನ ಯಾತ್ರೆ ಸಾಗಲಿ ಎಂಬುದು ನಮ್ಮ ಆಶಯ. ⌘

# ಪ್ಯಾರಾಮೆಡಿಕಲ್ ವಿದ್ಯಾರ್ಥಿಗಳಿಗೆ ಓರಿಯಂಟೇಷನ್ ಕಾರ್ಯಕ್ರಮ

ಶ್ರೀದೇವಿ ಇನ್ಸಿಟ್ಯೂಟ್ ಆಫ್ ಪ್ಯಾರಾಮೆಡಿಕಲ್ ಸೈನ್ಸ್ ಮತ್ತು ಶ್ರೀದೇವಿ ಇನ್ಸಿಟ್ಯೂಟ್ ಆಫ್ ಅಲೈಡ್ ಹೆಲ್ತ್ ಸೈನ್ಸ್‌ಗಳ ತುಮಕೂರು ಇವರ ಸಂಯುಕ್ತಾಶ್ರಯದಲ್ಲಿ ದ್ವಿತೀಯ ಮತ್ತು ತೃತೀಯ ವರ್ಷದ ಡಿಪ್ಲೋಮಾ ವಿದ್ಯಾರ್ಥಿಗಳಿಗೆ ಓರಿಯಂಟೇಷನ್ ಕಾರ್ಯಕ್ರಮವನ್ನು ನ.16 ರಂದು ಕ್ಲಿನಿಕಲ್ ತರಬೇತಿ ನೀಡುವ ಮುನ್ನ ಪೂರ್ವ ತಯಾರಿ ಬಗ್ಗೆ ತರಬೇತಿ ನೀಡಲಾಗಿತ್ತು.

ಈ ಸಂದರ್ಭ ಮಾತನಾಡಿದ ಡಾ. ಲಾವಣ್ಯ ರಮಣ ಅವರು, ಸದೃಢ ಸಮಾಜ ಹಾಗೂ ಆರೋಗ್ಯವಂತ ಸಮಾಜ ನಿರ್ಮಿಸಬೇಕಾದರೆ ಮಕ್ಕಳ ಆರೋಗ್ಯ ಅತ್ಯಮೂಲ್ಯವಾದದ್ದು, ಆಸ್ಪತ್ರೆಗೆ ಬರುವ ರೋಗಿಗಳ ಜೊತೆ ತಾಳ್ಮೆ, ಸಹೃದಯದಿಂದ ವರ್ತಿಸಬೇಕು, ಆಸ್ಪತ್ರೆಗೆ ಬರುವ ಪ್ರತಿಯೊಬ್ಬ ರೋಗಿಯಲ್ಲೂ ದೇವರನ್ನು ಕಾಣಬೇಕು, ಬದುಕಿನಲ್ಲಿ ಮಾನವೀಯತೆ ಬೆಳೆಸಿಕೊಳ್ಳಬೇಕು. ಶಿಸ್ತುಬದ್ಧ ಜೀವನವನ್ನು ವಿದ್ಯಾರ್ಥಿಗಳು ಪಾಲಿಸಬೇಕು. ವಿದ್ಯಾರ್ಥಿಗಳು ಆರೋಗ್ಯ ಮತ್ತು ಸ್ವಚ್ಛತೆಯ ಬಗ್ಗೆ ಹೆಚ್ಚು ಒತ್ತು ಕೊಡಬೇಕು. ವೈದ್ಯಕೀಯ ಕಾಲೇಜಿನಲ್ಲಿರುವ ಸವಲತ್ತುಗಳನ್ನು ಉಪಯೋಗಿಸಿಕೊಂಡು, ಉತ್ತಮ ಪರಿಣಿತಿ ಪಡೆದು ನೀವೆಲ್ಲಾ ಉತ್ತಮ ಮತ್ತು ನುರಿತ ಆರೋಗ್ಯವಂತ ಕಾರ್ಯಕರ್ತರಾಗಬೇಕು" ಎಂದರು.

ಶ್ರೀದೇವಿ ವೈದ್ಯಕೀಯ ಕಾಲೇಜಿನ ಸಂಸ್ಥಾಪಕ ಅಧ್ಯಕ್ಷರಾದ ಡಾ.ಎಂ.ಆರ್.ಹುಲಿನಾಯ್ಕರ್ ಹಾಗೂ ಮಾನವ ಸಂಪನ್ಮೂಲ ಮತ್ತು ಮಾಹಿತಿ ತಂತ್ರಜ್ಞಾನ ನಿರ್ದೇಶಕರಾದ ಎಂ.ಎಸ್.ಪಾಟೀಲ್ ಅವರು ಶುಭ ಕೋರಿದರು.

ಕಾರ್ಯಕ್ರಮದಲ್ಲಿ ಶ್ರೀದೇವಿ ಸಂಸ್ಥೆಯ ಆಡಳಿತಾಧಿಕಾರಿಯಾದ ಡಾ.ಎಂ.ಸಿ.ಬ್ರಹ್ಮದೇವಯ್ಯ ಮಾತನಾಡಿ, "ಪ್ಯಾರಾ ವೈದ್ಯಕೀಯ ಕೋರ್ಸ್, ವೈದ್ಯಕೀಯ ಕ್ಷೇತ್ರದಲ್ಲಿ ನೂತನ ಅವಿಷ್ಕಾರಗಳನ್ನು ಮಾಡುತ್ತೇವೆ. ನೂತನ ತಾಂತ್ರಿಕತೆ ಪರಿಣಿತಿಯುಳ್ಳ ಸಿಬ್ಬಂದಿಯ ಅವಶ್ಯಕತೆ ಇದೆ. ಅವರುಗಳಿಗೆ ಉದ್ಯೋಗದ ಅವಕಾಶವು ಯಥೇಚ್ಚವಾಗಿದೆ" ಎಂದರು.

ಶ್ರೀದೇವಿ ಪ್ಯಾರಾಮೆಡಿಕಲ್ ಪ್ರಾಂಶುಪಾಲರಾದ ಡಾ.ಎಂ.ಸಿ.ಕೃಷ್ಣ ಅವರು ಮಾತನಾಡಿ, "ಯುವ ಜನತೆ ವೈಜ್ಞಾನಿಕ ಮತ್ತು ಕೌಶಲ್ಯ ತಂತ್ರಜ್ಞಾನವನ್ನು ಮೂಡಿಸಿಕೊಂಡು ಉತ್ತಮ ಸಮಾಜ ನಿರ್ಮಾಣ ಮಾಡಲು ಮುಂದಾಗಬೇಕು" ಎಂದರು.

ಶ್ರೀದೇವಿ ಪ್ಯಾರಾಮೆಡಿಕಲ್ ಉಪಪ್ರಾಂಶುಪಾಲರಾದ ಡಾ.ಸಿ.ಪಿ.ಚಂದ್ರಪ್ಪ, ಶ್ರೀದೇವಿ ಪ್ಯಾರಾಮೆಡಿಕಲ್ ಕಾಲೇಜಿನ ಡೀನ್ ಡಾ.ಎಂ.ಎಂ.ಅಂಗಡಿ, ಡಾ.ಪಾಳ್ಯ ಮೊಹಮ್ಮದ್ ಮೊಹಿದ್ದೀನ್, ಡಾ. ಸರೋಜಿನಿ, ಉಪನ್ಯಾಸಕರಾದ ಗಂಗಮ್ಮ, ಮಹಾಲಕ್ಷ್ಮಿ, ಅಕ್ಷತಾ, ಅವರುಗಳು ಭಾಗವಹಿಸಿದ್ದರು. ⌘




ಶ್ರೀದೇವಿ ಇನ್ಸ್‌ಟ್ಯೂಟ್ ಆಫ್ ಪ್ಯಾರಾಮೆಡಿಕಲ್ ಸೈನ್ಸ್ ಮತ್ತು ಶ್ರೀದೇವಿ ಇನ್ಸ್‌ಟ್ಯೂಟ್ ಆಫ್ ಅಲೈಡ್ ಹೆಲ್ತ್ ಸೈನ್ಸ್‌ಗಳ ತುಮಕೂರು ಇವರ ಸಂಯುಕ್ತಾಶ್ರಯದಲ್ಲಿ ದ್ವಿತೀಯ ಮತ್ತು ತೃತೀಯ ವರ್ಷದ ಡಿಪ್ಲೋಮಾ ವಿದ್ಯಾರ್ಥಿಗಳಿಗೆ ಓರಿಯಂಟೇಷನ್ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಚಿತ್ರದಲ್ಲಿ ಶ್ರೀದೇವಿ ವೈದ್ಯಕೀಯ ಮಹಾವಿದ್ಯಾಲಯದ ನೇತ್ರತಜ್ಞರಾದ ಡಾ.ಲಾವಣ್ಯ, ಶ್ರೀದೇವಿ ಸಂಸ್ಥೆಯ ಆಡಳಿತಾಧಿಕಾರಿಯಾದ ಡಾ.ಎಂ.ಸಿ.ಬ್ರಹ್ಮದೇವಯ್ಯ, ಡೀನ್ ಡಾ.ಎಂ.ಎಂ.ಅಂಗಡಿ ಉಪಸ್ಥಿತರಿದ್ದರು.

# ಪ್ಯಾರಾಮೆಡಿಕಲ್ ಕಾಲೇಜಿನಲ್ಲಿ ಪೋಷಕರ ಮತ್ತು ಬೋಧಕರ ಸಮನ್ವಯ ಸಭೆ

ಶ್ರೀದೇವಿ ಇನ್ಸಿಟ್ಯೂಟ್ ಆಫ್ ಪ್ಯಾರಾಮೆಡಿಕಲ್ ಸೈನ್ಸ್ ಮತ್ತು ಶ್ರೀದೇವಿ ಇನ್ಸಿಟ್ಯೂಟ್ ಆಫ್ ಅಲೈಡ್ ಹೆಲ್ತ್ ಸೈನ್ಸ್ ಇವರ ಸಂಯುಕ್ತಾಶ್ರಯದಲ್ಲಿ ಬಿ.ಎಸ್ಸಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಪೋಷಕರ ಮತ್ತು ಬೋಧಕರ ಸಮನ್ವಯ ಸಭೆಯನ್ನು ಇತ್ತೀಚಿಗೆ ಶ್ರೀದೇವಿ ಕಾಲೇಜಿನಲ್ಲಿ ಹಮ್ಮಿಕೊಳ್ಳಲಾಗಿತ್ತು.

ಕಾರ್ಯಕ್ರಮ ಉದ್ಘಾಟಿಸಿದ ಡಾ.ಲಾವಣ್ಯ ರಮಣ ಅವರು ಮಾತನಾಡಿ, "ವಿದ್ಯಾರ್ಥಿಗಳ ತಂತ್ರಜ್ಞತೆಗೆ ತಕ್ಕಂತೆ ತಾಂತ್ರಿಕ ತರಬೇತಿ ನೀಡಲಾಗುತ್ತದೆ. ಅವರು ಸಮಯವನ್ನು ಸದುಪಯೋಗ ಪಡಿಸಿಕೊಳ್ಳಬೇಕು, ವಿವಿಧ ಪ್ರಯೋಗಾಲಯಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಳ್ಳಬೇಕು. ಈಗ ವಿದ್ಯಾರ್ಥಿಗಳು ಮಾನಸಿಕ ಒತ್ತಡದಲ್ಲಿರುತ್ತಾರೆ, ಯುವಕ-ಯುವತಿಯರು ವಿದ್ಯಾರ್ಥಿಗಳು ಅನೇಕ ಸಮಸ್ಯೆಗಳನ್ನು ಎದುರಿಸುತ್ತಿರುತ್ತಾರೆ, ಅದರಿಂದ ಕಲಿಕೆಯಲ್ಲಿ ಹಿಂದುಳಿದ ವಿದ್ಯಾರ್ಥಿಗಳ ಬಗ್ಗೆ ಬೋಧಕರು ವಿಶೇಷ ಕಾಳಜಿ ವಹಿಸಬೇಕು. ಪೋಷಕರು ತಮ್ಮ ಮಕ್ಕಳ ಮೇಲಿನ ಮಾನಸಿಕ ಒತ್ತಡ ಕಡಿಮೆ ಮಾಡುವತ್ತ ಗಮನಕೊಡಬೇಕು" ಎಂದರು.

ಶ್ರೀದೇವಿ ವೈದ್ಯಕೀಯ ಕಾಲೇಜಿನ ಸಂಸ್ಥಾಪಕ ಅಧ್ಯಕ್ಷರಾದ ಡಾ.ಎಂ.ಆರ್.ಹುಲಿನಾಯ್ಕರ್ ಹಾಗೂ ಮಾನವ ಸಂಪನ್ಮೂಲ ಮತ್ತು ಮಾಹಿತಿ ತಂತ್ರಜ್ಞಾನ ನಿರ್ದೇಶಕರಾದ ಎಂ.ಎಸ್.ಪಾಟೀಲ್‌ರವರು ವಿದ್ಯಾರ್ಥಿಗಳಿಗೆ ಶುಭ ಕೋರಿದರು.
ಶ್ರೀದೇವಿ ಪ್ಯಾರಾಮೆಡಿಕಲ್ ಪ್ರಾಂಶುಪಾಲರಾದ ಡಾ.ಎಂ.ಸಿ.ಕೃಷ್ಣರವರು ಮಾತನಾಡಿದರು. ⌘

**ಕಳೆದ 25 ವರ್ಷಗಳಿಂದ ಶ್ರೀದೇವಿ ಶಿಕ್ಷಣ ಸಂಸ್ಥೆ ಪ್ರತಿವರ್ಷ ಬೆಳೆಯುತ್ತಾ ಬಂದಿದೆ. ನರ್ಸಿಂಗ್ ಸ್ಕೂಲ್‌ನಿಂದ ಪ್ರಾರಂಭವಾದ ನಮ್ಮ ಶಿಕ್ಷಣಯಾನ ಇಂದು ಇಂಜಿನಿಯರಿಂಗ್ ಮತ್ತು ಮೆಡಿಕಲ್ ಶೈಕ್ಷಣಿಕ ಕ್ಷೇತ್ರದಲ್ಲಿ ಸ್ವತಂತ್ರವಾಗಿ ಸಂಶೋಧನೆ ಕೈಗೊಳ್ಳುವ ತನಕ ನಾವು ಬೆಳೆದಿದ್ದೇವೆ. ಇದರಲ್ಲಿ ಡಾ. ಎಂ.ಆರ್. ಹುಲಿನಾಯ್ಕರ್ ಮತ್ತು ಶ್ರೀಮತಿ ಶಾಂತಾ ದುರ್ಗಾದೇವಿ ಹುಲಿನಾಯ್ಕರ್ ಅವರ ಅಮೂಲ್ಯ ಶ್ರಮವಿರುವುದನ್ನು ನಾವ್ಯಾರು ಮರೆಯುವುದಿಲ್ಲ.**

**ಮನದ ಮಾತು**



**ಡಾ. ರಮಣ ಎಂ ಹುಲಿನಾಯ್ಕರ್**
ಕಾರ್ಯನಿರ್ವಾಹಕ ಸಂಪಾದಕರು
ನಿರ್ದೇಶಕರು, ಶ್ರೀದೇವಿ ವೈದ್ಯಕೀಯ ಕಾಲೇಜು

# ಸೃಜನಶೀಲತೆಗೆ ಒಂದು ವೇದಿಕೆ

ಶ್ರೀದೇವಿ ವಿದ್ಯಾಸಂಸ್ಥೆಯ ಇತಿಹಾಸದಲ್ಲಿ ಇದೊಂದು ಸುವರ್ಣ ಘಳಿಗೆ. ನಮ್ಮ ಚಿಂತನೆ, ಕಾರ್ಯ, ಅದರ ಫಲ, ವಿದ್ಯಾರ್ಥಿಗಳ ಸೃಜನಶೀಲತೆ, ಶೈಕ್ಷಣಿಕ ಸಾಧನೆ, ಬೋಧಕ ವರ್ಗದ ಬೆಳವಣಿಗೆ, ಸಂಶೋಧನೆ, ವಿನೂತನ ಪ್ರಯೋಗ, ಹೊಸ ಆವಿಷ್ಕಾರ, ಶ್ರೀದೇವಿ ಆಸ್ಪತ್ರೆ ಜನಪರವಾಗಿ ನಿರ್ವಹಿಸುತ್ತಿರುವ ಪದ್ಧತಿ, ನಾವು ಜನರ ಜೊತೆ ನಡೆಸುತ್ತಿರುವ ಸಂವಹನ, ಈ ಕ್ಯಾಂಪಸ್‌ನ ಅಧಿದೇವತೆ ಶ್ರೀ ದುರ್ಗಾಂಬಿಕಾದೇವಿ ಮಹಿಮೆ, ನಮ್ಮ ಜೊತೆ ಜನತೆಯ ಪಾಲ್ಗೊಳ್ಳುವಿಕೆ, ಪ್ರಸ್ತುತ ಸಮಾಜದ ಬಗ್ಗೆ ನಮ್ಮಗಳ ಅನಿಸಿಕೆಗಳು – ಹೀಗೆ ಹತ್ತಾರು ವಿಚಾರಗಳನ್ನು ಹಂಚಿಕೊಳ್ಳಲು ಹಾಗೂ ಸಹೃದಯರಿಂದ ಅಭಿಪ್ರಾಯ ಪಡೆದು ನಾವು ಮುಂದಿನ ಕಾರ್ಯಕ್ರಮಗಳನ್ನು ರೂಪಿಸಲು ವೇದಿಕೆ ಅಗತ್ಯ ಎಂದು ನಮಗೆಲ್ಲಾ ಬಹಳ ದಿನಗಳಿಂದ ಅನಿಸಿತ್ತು. ಆಧುನಿಕ ಪ್ರಪಂಚದಲ್ಲಿ ನೀವು ನಿಮ್ಮಷ್ಟಕ್ಕೆ ಹೆಜ್ಜೆ ಹಾಕುತ್ತಾ ಹೋಗುವ ಹಾಗಿಲ್ಲ. ನಿಮ್ಮ ಜೊತೆ ಎಲ್ಲರನ್ನು ಕರೆದುಕೊಂಡು ಹೋಗಬೇಕು. ನಿಮ್ಮ ಆಲೋಚನೆ ಮತ್ತು ಕಾರ್ಯಗಳನ್ನು ಪ್ರಜ್ಞಾವಂತರ ಮುಂದೆ ಮಂಡಿಸಬೇಕು. ನೀವು ಸಮುದಾಯವನ್ನು ಕರೆದುಕೊಂಡು ಹೋದರೆ ನಮ್ಮ ಶಕ್ತಿ ವೃದ್ಧಿಸುತ್ತದೆ. ನಿಮ್ಮ ಆಲೋಚನೆ ಮತ್ತು ಕಾರ್ಯವಿಧಾನಗಳನ್ನು ಪ್ರಜ್ಞಾವಂತರ ಗಮನಕ್ಕೆ ತಂದರೆ ಅನೇಕರು ಸಕಾರಾತ್ಮಕವಾದ ಚಿಂತನೆ ಮಾಡಿ ನಿಮ್ಮ ಬೆಳವಣಿಗೆಗೆ ಪೂರಕವಾದ ಮಾರ್ಗದರ್ಶನ ನೀಡುತ್ತಾರೆ.

ಇಂತಹ ಮಹತ್ವದ ವೇದಿಕೆಯನ್ನು ಶ್ರೀದೇವಿ ವಿದ್ಯಾಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷರಾದ ಪೂಜ್ಯ ಡಾ. ಎಂ. ಆರ್. ಹುಲಿನಾಯ್ಕರ್ ಅವರು ನಮಗೆಲ್ಲಾ ಒದಗಿಸಿದ್ದಾರೆ. ಅದನ್ನು ಸದುಪಯೋಗಪಡಿಸಿಕೊಳ್ಳುವ ಹೊಣೆಗಾರಿಕೆ ನಮ್ಮೆಲ್ಲರ ಮೇಲಿದೆ.

ಮಾಧ್ಯಮ ಕ್ಷೇತ್ರದಲ್ಲಿ ನಾವುಗಳು ಪುಟ್ಟ ಹೆಜ್ಜೆಯಿಡಲು ಅವಕಾಶ ಮಾಡಿಕೊಟ್ಟ ಸಂಸ್ಥೆಯ ಅಧ್ಯಕ್ಷರಾದ ಡಾ. ಎಂ.ಆರ್. ಹುಲಿನಾಯ್ಕರ್ ಅವರಿಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಅವರ ಜೊತೆ ಪ್ರೇರಣೆ ನೀಡಿದ ಎಲ್ಲರಿಗೂ ಕೃತಜ್ಞತೆಗಳು.

'ಶ್ರೀದೇವಿ ಅಂತರಂಗ' ಮಾಸ ಪತ್ರಿಕೆ ನಮ್ಮೆಲ್ಲರ ಧ್ವನಿಯಾಗಬೇಕು. ಕಳೆದ 25 ವರ್ಷಗಳಿಂದ ಶ್ರೀದೇವಿ ಶಿಕ್ಷಣ ಸಂಸ್ಥೆ ಪ್ರತಿವರ್ಷ ಬೆಳೆಯುತ್ತಾ ಬಂದಿದೆ. ನರ್ಸಿಂಗ್ ಸ್ಕೂಲ್‌ನಿಂದ ಪ್ರಾರಂಭವಾದ ನಮ್ಮ ಶಿಕ್ಷಣಯಾನ ಇಂದು ಇಂಜಿನಿಯರಿಂಗ್ ಮತ್ತು ಮೆಡಿಕಲ್ ಶೈಕ್ಷಣಿಕ ಕ್ಷೇತ್ರದಲ್ಲಿ ಸ್ವತಂತ್ರವಾಗಿ ಸಂಶೋಧನೆ ಕೈಗೊಳ್ಳುವ ತನಕ ನಾವು ಬೆಳೆದಿದ್ದೇವೆ. ಇದರಲ್ಲಿ ಡಾ. ಎಂ.ಆರ್. ಹುಲಿನಾಯ್ಕರ್ ಮತ್ತು ಶ್ರೀಮತಿ ಶಾಂತಾ ದುರ್ಗಾದೇವಿ ಹುಲಿನಾಯ್ಕರ್ ಅವರ ಅಮೂಲ್ಯ ಶ್ರಮವಿರುವುದನ್ನು ನಾವ್ಯಾರು ಮರೆಯುವುದಿಲ್ಲ. ಜೊತೆಗೆ ಅನೇಕ ಹಿರಿಯರ ಮತ್ತು ಬೋಧಕ ಹಾಗೂ ಬೋಧಕೇತರ ಸಿಬ್ಬಂದಿಗಳ ಕೊಡುಗೆಯಿರುವುದು ನನಗೆ ಪರಿಚಿತವಾದ ವಿಚಾರ.

ಪ್ರಗತಿ ಎಂಬುದು ಚಲನಶೀಲ ಪ್ರಕ್ರಿಯೆ. ಅದು ಸ್ಥಗಿತವಾದರೆ ಏನೂ ಬೆಳವಣಿಗೆ ಸಾಧ್ಯವಿಲ್ಲ. ಈ ದೃಷ್ಟಿಯಿಂದ ಶ್ರೀದೇವಿ ಶಿಕ್ಷಣ ಸಂಸ್ಥೆ ಮತ್ತಷ್ಟು ಕ್ರಿಯಾಶೀಲವಾಗಬೇಕಾಗಿದೆ. ನಮ್ಮ ಬೆಳವಣಿಗೆ ಈ ಸಮಾಜಕ್ಕೆ ಅನುಕೂಲ ಎಂಬ ದೃಷ್ಟಿಕೋನ ನಮ್ಮಲ್ಲಿರಬೇಕು. ನಾವು ಹೊಸ ಕೋರ್ಸ್‌ಗಳನ್ನು ಮಾಡಿದರೆ, ವೈದ್ಯಕೀಯ ಕಾಲೇಜಿನ ಆಸ್ಪತ್ರೆಯಲ್ಲಿ ಸುಧಾರಣೆಗಳನ್ನು ತಂದರೆ ಅದರ ಪ್ರಯೋಜನವನ್ನು ಜನತೆಯೇ ಪಡೆಯುತ್ತಾರೆ. ಅದಕ್ಕಾಗಿ ನಾವು ಮಾಡುವ ಪ್ರತಿ ಕೆಲಸವನ್ನು ನಿಷ್ಠೆಯಿಂದ ಮಾಡಬೇಕಾಗಿದೆ. ಅದರಿಂದ ಸಮಾಜಕ್ಕೆ ಬಹುದೊಡ್ಡ ಪ್ರಯೋಜನ ದೊರೆಯುತ್ತದೆ. ಈ ಅರ್ಥದಲ್ಲಿ ನಮ್ಮೆಲ್ಲರ ಕೆಲಸ ಸಮಾಜದ ಪ್ರಗತಿಗೆ ಪೂರಕವಾಗಿರುತ್ತದೆ. ಈ ಕೆಲಸಗಳನ್ನು ಜನತೆಗೆ ತಿಳಿಸುವುದು ಸಹ ಅಷ್ಟೇ ಮುಖ್ಯ. ಇದನ್ನು ಈ ಪತ್ರಿಕೆ ಮಾಡುತ್ತದೆ ಎಂಬ ವಿಶ್ವಾಸ ನನ್ನದು. ಪತ್ರಿಕೆಯ ಉದ್ದೇಶವೇ ಜನತೆಯಲ್ಲಿ ಅರಿವು ಮೂಡಿಸುವುದಾಗಿದೆ.

ಮಾಧ್ಯಮವೂ ಸದಾ ಜನಪರವಾಗಿ ಚಿಂತಿಸುತ್ತವೆ. ಅದಕ್ಕೆ ನಮ್ಮ ಶ್ರೀದೇವಿ ಅಂತರಂಗ ಮಾಸಪತ್ರಿಕೆ ಹೊರತಲ್ಲ. ಹೊಸ ಪತ್ರಿಕೆಯ ಪ್ರಾರಂಭದ ಉದ್ದೇಶವನ್ನು ಬಹಳ ಹಿಂದೆ ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರಾದ ಡಾ. ಶಿವರಾಮ ಕಾರಂತರ ಅವರು ಒಂದೆಡೆ ಹೇಳಿದ್ದಾರೆ. "ಯಾವ ಉದ್ದೇಶದಿಂದಲಾದರೂ ಒಂದು ಪತ್ರಿಕೆ ಪ್ರಕಟವಾಗಲಿ. ಅದು ರಾಷ್ಟ್ರಸೇವೆ, ಸಮಾಜಸೇವೆ ಮತ್ತು ಸಾಹಿತ್ಯಸೇವೆಯನ್ನು ಗುರಿಯಾಗಿಟ್ಟು ಕೊಳ್ಳಬೇಕು".
ಡಾ. ಶಿವರಾಮ ಕಾರಂತರ ಮಾತುಗಳು ನಮಗೆ ವೇದವಾಕ್ಯ. ನಾವು–ನೀವು ಸೇರಿ ಈ ಪತ್ರಿಕೆಯ ಮೂಲಕ ಡಾ. ಶಿವರಾಮ ಕಾರಂತ ಅವರು ಹೇಳಿದ ಕೆಲಸವನ್ನು ಮಾಡೋಣ!.

**ನಿರೂಪಣೆ: ಕಮಲೇಶ್**

■ **ವಿಶೇಷ ವರದಿ**

# ರೇಡಿಯಾಲಜಿ ವೈದ್ಯಕೀಯ ಸೇವೆಯ ಅವಿಭಾಜ್ಯ ಅಂಗ

**ಪ್ರತಿ ವರ್ಷ ನವೆಂಬರ್ 8 ರಂದು ವಿಶ್ವದಾದ್ಯಂತ "ವಿಶ್ವ ರೇಡಿಯೋಲಜಿ ದಿನ" ಎಂದು ಆಚರಿಸಿ ವಿಕಿರಣ ಶಾಸ್ತ್ರದಿಂದ ವೈದ್ಯಕೀಯ ರಂಗಕ್ಕೆ ಉಂಟಾಗುವ ಸಹಾಯಗಳನ್ನು ಸ್ಮರಿಸಲಾಗುತ್ತದೆ. 1895 ನೇ ನವೆಂಬರ್ 8 ರಂದು "ವಿಲಿಯನರ್ ಕೊನಾಡ್‌ರೊಂಟ್ ಜೆನ್" ಎಂಬ ವಿಜ್ಞಾನಿ ಕ್ಷ–ಕಿರಣಗಳನ್ನು ಪತ್ತೆ ಹೆಚ್ಚಿದನು.**

"ಇತ್ತೀಚಿನ ದಿನಗಳಲ್ಲಿ ವಿಕಿರಣಶಾಸ್ತ್ರ ಮತ್ತು ರೇಡಿಯಾಲಜಿ – ವೈದ್ಯಕೀಯ ಸೇವೆಯ ಅವಿಭಾಜ್ಯ ಅಂಗವಾಗಿದೆ, ಆಧುನಿಕ ವೈದ್ಯಕೀಯ ಜಗತ್ತಿನಲ್ಲಿ ಚಿಕಿತ್ಸೆಗಳ ನಿರ್ಧಾರ ಮಾಡುವಾಗ ಮತ್ತು ರೋಗ ಪತ್ತೆ ಹಚ್ಚುವಲ್ಲಿ ಕ್ಷ–ಕಿರಣಗಳು ಮಹತ್ತರವಾದ ಪಾತ್ರ ವಹಿಸುತ್ತಿವೆ. ಕ್ಷ–ಕಿರಣಗಳನ್ನು ಯಾವ ರೀತಿ ಉಪಯೋಗಿಸಬೇಕು, ಅದನ್ನು ಕಂಡು ಹಿಡಿದ ರೀತಿಯ ಬಗ್ಗೆ ಸ್ವವಿವರ ಚಿತ್ರಗಳನ್ನು ತೋರಿಸುತ್ತಾ, ಎಕ್ಸ್‌ರೇಯಿಂದ ಈ ತನಕ ರೇಡಿಯಾಲಜಿ ಕ್ಷೇತ್ರದಲ್ಲಿ ಆಗಿರುವ ಬೆಳವಣಿಗೆ ಅದ್ಭುತವಾದದ್ದು. ಕ್ಷ–ಕಿರಣವು ಸಂಶೋಧನೆ ಮಾಡುತ್ತಿರುವಾಗ ಆಕಸ್ಮಿಕವಾಗಿ ಕಂಡು ಹಿಡಿಯಲಾಗಿದ್ದು, ಇದಕ್ಕೆ "ವಿಲಿಯನರ್ ಕೊನಾಡ್‌ರೊಂಟ್ ಜೆನ್" ಎಂಬ ವಿಜ್ಞಾನಿಯ ಹೆಸರು ಇಡಬೇಕಾಯಿತು. ಆತನೇ ಇದಕ್ಕೆ ಎಕ್ಸ್–ರೇ ಎಂದು ಕರೆದನು. ಇವರ ಈ ಸಂಶೋಧನೆಗೆ ಅವರಿಗೆ ನೊಬೆಲ್ ಪರಿತೋಷಕ ಬಂದಿದೆ. ಇದರ ತಳಹದಿರಯ ಮೇಲೆ ಅನೇಕ ಆವಿಷ್ಕಾರಗಳು ನಡೆದಿವೆ" ಎಂದು ಧಾರವಾಡದ ಎಸ್.ಡಿ.ಎಂ. ವಿಶ್ವವಿದ್ಯಾಲಯದ ಪ್ರೊ–ಉಪಕುಲತಿಗಳಾದ ಡಾ.ಶ್ಯಾಮಸುಂದರ್ ಕೆ.ಜೋಶಿರವರು ತಿಳಿಸಿದರು.

ನಗರದ ಶ್ರೀದೇವಿ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಆಸ್ಪತ್ರೆಯ ಹಾಗೂ ಶ್ರೀದೇವಿ ಅಲೈಡ್ ಹೆಲ್ತ್ ಸೈನ್ಸ್ ವಿಭಾಗದ ಸಂಯುಕ್ತಾಶ್ರಯ, ರೇಡಿಯೋಲಜಿ ವಿಭಾಗದಲ್ಲಿ ನಡೆದ "ವಿಶ್ವ ರೇಡಿಯೋಲಜಿ ದಿನಾಚರಣೆಯ ಸಂದರ್ಭದಲ್ಲಿ ಅವರು ಮಾತನಾಡುತ್ತಿದ್ದರು.

ಪ್ರತಿ ವರ್ಷ ನವೆಂಬರ್ 8 ರಂದು ವಿಶ್ವದಾದ್ಯಂತ "ವಿಶ್ವ ರೇಡಿಯೋಲಜಿ ದಿನ" ಎಂದು ಆಚರಿಸಿ ವಿಕಿರಣ ಶಾಸ್ತ್ರದಿಂದ ವೈದ್ಯಕೀಯ ರಂಗಕ್ಕೆ ಉಂಟಾಗುವ ಸಹಾಯಗಳನ್ನು ಸ್ಮರಿಸಲಾಗುತ್ತದೆ. 1895ನೇ ನವೆಂಬರ್ 8 ರಂದು "ವಿಲಿಯನರ್ ಕೊನಾಡ್‌ರೊಂಟ್ ಜೆನ್" ಎಂಬ ವಿಜ್ಞಾನಿ ಕ್ಷ–ಕಿರಣಗಳನ್ನು ಪತ್ತೆ ಹೆಚ್ಚಿದನು. ಕ್ಯಾಥೋಡ್ ಕಿರಣಗಳ ಬಗ್ಗೆ ಸಂಶೋಧನೆ ನಡೆಸುವಾಗ ಆಕಸ್ಮಿಕವಾಗಿ ಕ್ಷ–ಕಿರಣಗಳನ್ನು ಆತ ಪತ್ತೆ ಹಚ್ಚಿದ್ದ ಈ ಸಂಶೋಧನೆ ಮುಂದೆ ವೈದ್ಯಕೀಯ ಕ್ಷೇತ್ರದಲ್ಲಿ ಬಹಳಷ್ಟು ಕ್ರಾಂತಿಕಾರಿ ಬೆಳವಣಿಗೆಗೆ ನಾಂದಿ ಹಾಡಿದರು.

ಕಾರ್ಯಕ್ರಮದಲ್ಲಿ ಅಧ್ಯಕ್ಷತೆ ವಹಿಸಿದ್ದ ಡಾ.ಎಂ.ಆರ್.ಹುಲಿನಾಯ್ಕರ್‌ರವರು "ಆಧುನಿಕ ವೈದ್ಯಕೀಯ ವಿಜ್ಞಾನ ಹತ್ತು ಹಲವಾರು ಸಂಶೋಧನೆಗಳನ್ನು ಮಾಡುತ್ತಾ ವಿವಿಧ ಉಪಕರಣಗಳನ್ನು ಕಾಯಿಲೆಗಳನ್ನು ಕಂಡು ಹಿಡಿಯುವುದಕ್ಕಾಗಿ ಬಳಸಲಾಗುತ್ತಿದ್ದು, ಈ ಆಧುನಿಕ ಉಪಕರಣಗಳನ್ನು ವ್ಯವಸ್ಥಿತವಾಗಿ ಉಪಯೋಗಿಸಬೇಕಾದರೆ ತಂತ್ರಜ್ಞರ ಅವಶ್ಯಕತೆ ಹೆಚ್ಚಾಗಿರುತ್ತದೆ. ಈ ನಿಟ್ಟಿನಲ್ಲಿ ನಮ್ಮ ವೈದ್ಯಕೀಯ ಕಾಲೇಜಿನ ಎಲ್ಲಾ ವಿಭಾಗಗಳಂತೆ ಕೌಶಲ್ಯಾಭಿವೃದ್ಧಿ ತರಬೇತಿಯನ್ನು ರಚಿಸಲಾಗಿದೆ, ಇದರ ಉಪಯೋಗವನ್ನು ತಂತ್ರಜ್ಞರು, ಆರೋಗ್ಯ ಸಿಬ್ಬಂದಿ, ವೈದ್ಯಕೀಯ ವಿದ್ಯಾರ್ಥಿಗಳು ಇದರ ಉಪಯೋಗವನ್ನು ಪಡೆದುಕೊಳ್ಳಬೇಕು ಎಂದರು.

ಡಾ.ರಮಣ್ ಆರ್ ಹುಲಿನಾಯ್ಕರ್, ರೇಡಿಯಾಲಜಿಸ್ಟ್‌ರಾದ ಡಾ.ಕೊಟ್ಟೂರು, ಡಾ.ಲಾವಣ್ಯ, ಮೆಡಿಕಲ್‌ಕಾಲೇಜಿನ ಪ್ರಾಂಶುಪಾಲರಾದ ಡಾ.ಎಂ.ಎಲ್. ಹರೇಂದ್ರಕುಮಾರ್, ಪ್ಯಾರಾಮೆಡಿಕಲ್ ವಿದ್ಯಾಲಯದ ಪ್ರಾಂಶುಪಾಲರಾದ ಡಾ.ಎಂ.ಸಿ.ಕೃಷ್ಣ, ಶ್ರೀದೇವಿ ಆಸ್ಪತ್ರೆಯ ಸ್ತ್ರೀರೋಗತಜ್ಞರು ಹಾಗೂ ಉಪಪ್ರಾಂಶುಪಾಲರಾದ ಡಾ.ರೇಖಾಗುರುಮೂರ್ತಿ ಅವರು ಭಾಗವಹಿಸಿದ್ದರು. ⌘




**ಶ್ರೀದೇವಿ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಆಸ್ಪತ್ರೆಯ ಹಾಗೂ ಶ್ರೀದೇವಿ ಅಲೈಡ್ ಹೆಲ್ತ್ ಸೈನ್ಸ್ ವಿಭಾಗದ ಸಂಯುಕ್ತಾಶ್ರಯ, ರೇಡಿಯೋಲಜಿ ವಿಭಾಗದೊಂದಿಗೆ "ವಿಶ್ವ ರೇಡಿಯೋಲಜಿ ದಿನಾಚರಣೆ". ಚಿತ್ರದಲ್ಲಿ ಡಾ.ಎಂ.ಆರ್.ಹುಲಿನಾಯ್ಕರ್, ಧಾರವಾಡದ ಎಸ್.ಡಿ.ಎಂ. ವಿಶ್ವವಿದ್ಯಾಲಯದ ಪ್ರೊ–ಉಪಕುಲತಿಗಳಾದ ಡಾ.ಶ್ಯಾಮಸುಂದರ್ ಕೆ.ಜೋಶಿ, ತುಮಕೂರಿನ ಹಿರಿಯ ಸಲಹೆಗಾರರಾದ ರೇಡಿಯಾಲಜಿಸ್ಟ್‌ರಾದ ಡಾ.ಕೊಟ್ಟೂರು, ಡಾ.ಎಂ.ಎಲ್.ಹರೇಂದ್ರಕುಮಾರ್, ಡಾ.ಎಂ.ಸಿ.ಕೃಷ್ಣ, ಡಾ.ರೇಖಾಗುರುಮೂರ್ತಿ ಹಾಗೂ ಬ್ರಹ್ಮದೇವಯ್ಯ ಅವರುಗಳಿದ್ದಾರೆ.**






– ಎನ್. ಭಾರತಿ

ಉದ್ಘಾಟನಾ ಸಮಾರಂಭದಲ್ಲಿ ಡಾ.ವೆಂಕಟೇಶ್, ಡಾ. ಲಾವಣ್ ರಮಣ್, ಡಾ.ರಮಣ್ ಹುಲಿನಾಯ್ಕರ್, ಡಾ.ಮನೋನ್ಮಣಿ, ಶ್ರೀಮತಿ ಶಾಂತಾ ದುರ್ಗಾದೇವಿ ಹುಲಿನಾಯ್ಕರ್, ಡಾ. ಕೆ.ಅನಂತರಾಮು, ಆಚಾರ್ಯ ಎಂ.ನಾಗರಾಜ್, ಡಾ.ಎಂ.ಆರ್.ಹುಲಿನಾಯ್ಕರ್, ಪ್ರಜಾಪ್ರಗತಿಯ ನಾಗಣ್ಣ, ಎಂ.ಎಸ್.ಪಾಟೀಲ್, ಹಾಗೂ ವಿಜಯಲಕ್ಷ್ಮಿ ಉಪಸ್ಥಿತರಿದ್ದರು.

‘ನಾವು ಜಗತ್ತಿನ ಅನೇಕ ಘಟನೆಗಳಿಗೆ ಸರಿಯಾದ ಕಾರಣಗಳನ್ನು ಕುರಿತು ಯೋಚಿಸುವುದಿಲ್ಲ. ಅದೊಂದು ಸಹಜವಾಗಿ ನಡೆಯುವ ಘಟನೆ ಎಂದೂ ಭಾವಿಸುತ್ತೇವೆ. ಪ್ರತಿ ಘಟನೆಗೂ ಕಾರ್ಯ ಕಾರಣ ಸಂಬಂಧವಿದೆ. ಈ ಭಾಗದಲ್ಲಿ ಗ್ರಾಮದೇವತೆ ಉಚ್ಚಂಗಮ್ಮ ಬಹಳ ಕಾಲದಿಂದಲೂ ಇದ್ದಳು. ಸ್ವಲ್ಪದಿನ ಆಕೆಯನ್ನು ನೋಡಲು ಭಕ್ತರಿಗೆ ಸಾಧ್ಯವಿರಲಿಲ್ಲ. ಈಗ ಶ್ರೀದುರ್ಗಾಂಬಿಕಾದೇವಿಯಾಗಿ ಇಲ್ಲಿ ಬಂದು ನೆಲಸಿದ್ದಾಳೆ. ಹಾಗೇ ಬರುವುದಕ್ಕೆ ಆಕೆ ತೆಗೆದುಕೊಂಡ ಕಾಲ ಯಾರಿಗೂ ಗೊತ್ತಿಲ್ಲ. ಸುವರ್ಣಮುಖಿ ಸಂಸ್ಕೃತಿಧಾಮದಲ್ಲಿರುವ ಶ್ರೀ ಮಾತಾ ಲಲಿತಾಪರಮೇಶ್ವರಿ ದೂರದ ಮಿಚಿಗನ್‌ನಲ್ಲಿ ಗ್ಯಾಸ್ಟ್ರೋಎಂಟಾರಾಲಾಜಿಯಲ್ಲಿ ಖ್ಯಾತ ವೈದ್ಯರಾಗಿದ್ದ ಡಾ. ಎಂ.ನಾಗರಾಜ್ ಅವರನ್ನು ಕರೆಸಿಕೊಂಡಳು. ಡಾ. ಎಂ. ನಾಗರಾಜ್ ಅವರು ದೇವಿಯ ಆಜ್ಞೆಯಂತೆ ತಮ್ಮ ಇಡೀ ಬದುಕನ್ನು ಸಮಾಜಕ್ಕೆ ಧಾರೆಯೆರೆದಿದ್ದಾರೆ.”

# ಶ್ರೀ ದುರ್ಗಾಂಬಿಕಾದೇವಿಯ ಸನ್ನಿಧಿಯಲ್ಲಿ ವಿನೂತನ ಕಾರ್ಯಕ್ರಮ

2022ರ ನವೆಂಬರ್ 13 ಡಾ. ಎಂ.ಆರ್. ಹುಲಿನಾಯ್ಕರ್ ಮತ್ತು ಶ್ರೀಮತಿ ಶಾಂತಾದುರ್ಗಾದೇವಿ ಹುಲಿನಾಯ್ಕರ್ ದಂಪತಿಗಳು ಕಂಡ ಕನಸು ನನಸಾದ ದಿನ. ಶ್ರೀ ದುರ್ಗಾಂಬಿಕಾದೇವಿ ಮತ್ತು ಜಗತ್ತಿನ ಪಾಲಕನಾದ ಶ್ರೀ ಶಂಭುಲಿಂಗೇಶ್ವರಸ್ವಾಮಿಯ ಸನ್ನಿಧಿಯಲ್ಲಿ ಅಧ್ಯಾತ್ಮಸಾಧಕರಿಗೆ ಮತ್ತು ಸಮಾಜ ಸೇವಾಸಕ್ತರಿಗೆ ಅಭಿನಂದನೆ ಮತ್ತು ಸನ್ಮಾನ ನಿರಂತರವಾಗಿ ನಡೆಯಬೇಕು ಎಂದು ಆ ದಂಪತಿಗಳಿಬ್ಬರೂ ಕನಸು ಕಂಡಿದ್ದರು. ದೇವಿ ಸದಾ ಇಂತಹ ಕನಸುಗಳನ್ನು ನನಸು ಮಾಡುತ್ತಲೇ ಇರುತ್ತಾಳೆ. ನವೆಂಬರ್ 13 ಆ ದಿನವಾಗಿತ್ತು.

ಶ್ರೀ ದುರ್ಗಾಂಬಿಕಾ ದೇವಸ್ಥಾನ ಚಾರಿಟಬಲ್ ಟ್ರಸ್ಟ್ ನೀಡುವ ‘ಶ್ರೀದೇವಿ ರಮಣಮಹರ್ಷಿ ಪುರಸ್ಕಾರ’ವನ್ನು ಅಂದು ಬೆಂಗಳೂರು–ಕನಕಪುರ ರಸ್ತೆಯ ವಡೇರಹಳ್ಳಿಯಲ್ಲಿ ಸುವರ್ಣಮುಖಿ ಸಂಸ್ಕೃತಿಧಾಮ ಎನ್ನುವ ವಿಶಿಷ್ಟ ಸಂಸ್ಥೆಯ ರೂವಾರಿ ಡಾ.ಎಂ.ನಾಗರಾಜ್ ಅವರಿಗೆ ಪ್ರದಾನ ಮಾಡಲಾಯಿತು. ಅದೊಂದು ಸದಾ ನೆನಪಿನಲ್ಲಿ ಉಳಿಯುವ ಕಾರ್ಯಕ್ರಮವಾಗಿದೆ.

ಪ್ರಾರಂಭದಲ್ಲಿ ವೇದಿಕೆಯ ಮೇಲಿದ್ದ ಆಚಾರ್ಯ ಡಾ. ಎಂ. ನಾಗರಾಜ್, ಮೈಸೂರಿನ ನಿವೃತ್ತ ಪ್ರಾಧ್ಯಾಪಕರಾಗಿರುವ ಡಾ. ಕೆ. ಅನಂತರಾಮು, ಮಾಜಿ ಸಚಿವರಾದ ಹೆಚ್.ವಿಶ್ವನಾಥ ಹಾಗೂ ಮಾಜಿ ಸಚಿವರಾದ ಹೆಚ್.ಎಂ. ರೇವಣ್ಣ, ಡಾ. ಎಂ.ಆರ್. ಹುಲಿನಾಯ್ಕರ್, ಶ್ರೀಮತಿ ಶಾಂತಾದುರ್ಗಾದೇವಿ ಹುಲಿನಾಯ್ಕರ್, ಡಾ. ಮನೋನ್ಮಣಿ, ಡಾ. ಕೆ.ಆರ್.ಕಮಲೇಶ ಮತ್ತು ಸಭಿಕರನ್ನು ಸ್ವಾಗತಿಸಿದ ಶ್ರೀದೇವಿ ವೈದ್ಯಕೀಯ ಕಾಲೇಜಿನ ನಿರ್ದೇಶಕರಾದ ಡಾ. ರಮಣ ಹುಲಿನಾಯ್ಕರ್ ಅವರು “ಡಾ. ಹುಲಿನಾಯ್ಕರ್ ದಂಪತಿಗಳು ಕನಸು ಮತ್ತು ಅವರ ಅಪಾರ ದುಡಿಮೆ ಇಂತಹ ವಿನೂತನ ಸಂಸ್ಥೆಯ ಪ್ರಾರಂಭಕ್ಕೆ ಕಾರಣವಾಗಿದೆ. ಅವರ ಮಾರ್ಗದರ್ಶನದಲ್ಲಿ ನಾವು ಮಾಡಬೇಕಾಗಿರುವ ಕೆಲಸ ಬಹಳಷ್ಟಿದೆ” ಎಂದರು.

ಪ್ರಾಸ್ತವಿಕವಾಗಿ ಮಾತನಾಡಿದ ಡಾ.ಎಂ. ಆರ್. ಹುಲಿನಾಯ್ಕರ್ ಅವರು “ನಾವು ಜಗತ್ತಿನ ಅನೇಕ ಘಟನೆಗಳಿಗೆ ಸರಿಯಾದ ಕಾರಣಗಳನ್ನು ಕುರಿತು ಯೋಚಿಸುವುದಿಲ್ಲ. ಅದೊಂದು ಸಹಜವಾಗಿ ನಡೆಯುವ ಘಟನೆ ಎಂದೂ ಭಾವಿಸುತ್ತೇವೆ. ಪ್ರತಿ ಘಟನೆಗೂ ಕಾರ್ಯ ಕಾರಣ ಸಂಬಂಧವಿದೆ. ಈ ಭಾಗದಲ್ಲಿ ಗ್ರಾಮದೇವತೆ ಉಚ್ಚಂಗಮ್ಮ ಬಹಳ ಕಾಲದಿಂದಲೂ ಇದ್ದಳು. ಸ್ವಲ್ಪದಿನ ಆಕೆಯನ್ನು ನೋಡಲು ಭಕ್ತರಿಗೆ ಸಾಧ್ಯವಿರಲಿಲ್ಲ. ಈಗ ಶ್ರೀದುರ್ಗಾಂಬಿಕಾದೇವಿಯಾಗಿ ಇಲ್ಲಿ ಬಂದು ನೆಲಸಿದ್ದಾಳೆ. ಹಾಗೇ ಬರುವುದಕ್ಕೆ ಆಕೆ ತೆಗೆದುಕೊಂಡ ಕಾಲ ಯಾರಿಗೂ ಗೊತ್ತಿಲ್ಲ. ಸುವರ್ಣಮುಖಿ ಸಂಸ್ಕೃತಿಧಾಮದಲ್ಲಿರುವ ಶ್ರೀ ಮಾತಾ ಲಲಿತಾಪರಮೇಶ್ವರಿ ದೂರದ ಮಿಚಿಗನ್‌ನಲ್ಲಿ ಗ್ಯಾಸ್ಟ್ರೋಎಂಟಾರಾಲಾಜಿಯಲ್ಲಿ ಖ್ಯಾತ ವೈದ್ಯರಾಗಿದ್ದ ಡಾ. ಎಂ.ನಾಗರಾಜ್ ಅವರನ್ನು ಕರೆಸಿಕೊಂಡಳು. ಇದೇನೂ ಸಾಮಾನ್ಯದ ಘಟನೆಯಲ್ಲ. ಡಾ.ಎಂ. ನಾಗರಾಜ್ ಅವರು ದೇವಿಯ ಆಜ್ಞೆಯಂತೆ ತಮ್ಮ ಇಡೀ ಬದುಕನ್ನು ಸಮಾಜಕ್ಕೆ ಧಾರೆಯೆರೆದಿದ್ದಾರೆ” ಎಂದರು.

ಗ್ಯಾಸ್ಟ್ರೋಎಂಟಾರಾಲಾಜಿಯಲ್ಲಿ ಸರ್ಜನ್ ಆಗಿರುವ ಶ್ರೀದೇವಿ ವೈದ್ಯಕೀಯ ಕಾಲೇಜಿನ ಸರ್ಜರಿ ವಿಭಾಗದಲ್ಲಿ ಪ್ರಾಧ್ಯಾಪಕರಾಗಿರುವ ಡಾ, ಮನೋನ್ಮಣಿ ಅವರು ಭಿನ್ನವತ್ತಳೆ ವಾಚನ ಮಾಡಿ ಸಭಿಕರಿಗೆ ಡಾ. ನಾಗರಾಜ್ ಅವರ ಬದುಕಿನ ವಿವಿಧ ಹಂತಗಳನ್ನು ಪರಿಚಯ ಮಾಡಿಕೊಟ್ಟರು. ತಮ್ಮ ದುಡಿಮೆಯ ಫಲವನ್ನು ಸಮಾಜಕ್ಕೆ ಅರ್ಪಿಸುತ್ತಿರುವ ಡಾ.ಎಂ. ನಾಗರಾಜ್ ಅವರು ತುಂಬಾ ಅಪರೂಪದ ವ್ಯಕ್ತಿತ್ವದವರು ಎಂದು ಡಾ. ಮನೋನ್ಮಣಿ ಅಭಿಪ್ರಾಯಪಟ್ಟರು.

ಡಾ. ಕೆ.ಆರ್.ಕಮಲೇಶ ಅವರು ಆಚಾರ್ಯ ಡಾ. ಎಂ. ನಾಗರಾಜ್ ಅವರನ್ನು ಕುರಿತು ರಚಿಸಿರುವ ‘ಸೇವೆಗೆ ಮುಡಿಪಿಟ್ಟ ನಂದಾದೀಪ’ ಕೃತಿಯನ್ನು ಬಿಡುಗಡೆ ಮಾಡಿದ ಡಾ.ಕೆ. ಅನಂತರಾಮು ಅವರು ‘ನನ್ನ ವಿದ್ಯಾರ್ಥಿ ಮಿತ್ರರಾದ ಡಾ. ಕಮಲೇಶ್ ಅವರು ಕ್ಷೇತ್ರಕಾರ್ಯದ ಮೂಲಕ ವಿಷಯ ಸಂಗ್ರಹ ಮಾಡಿ ಈ ಕೃತಿಯನ್ನು ಬಹಳ ಅಚ್ಚುಕಟ್ಟಾಗಿ ಬರೆದಿದ್ದಾರೆ. ಈ ಕೃತಿ ಆಚಾರ್ಯ ನಾಗರಾಜ್ ಅವರ ವ್ಯಕ್ತಿತ್ವವನ್ನು ಸಮಗ್ರವಾಗಿ ಚಿತ್ರಿಸುತ್ತದೆ. ಆಚಾರ್ಯ ಡಾ. ಎಂ. ನಾಗರಾಜ್ ಅವರು ಕೋಟಿಗೊಬ್ಬ ಹುಟ್ಟುವ ಮಹಾಮಹಿಮರು. ಅವರು ತ್ಯಾಗವೀರರು. ಸಂಸ್ಕೃತಿಯ ಆರಾಧಕರು. ಅಧ್ಯಾತ್ಮ ಜೀವಿಗಳು. ವಿದ್ಯಾರ್ಥಿಗಳಿಗೆ ತಂದೆಯ ಸಮಾನದಲ್ಲಿರುವವರು. ಅಮೆರಿಕಾದಲ್ಲಿ ಭಾರತೀಯ ಸಂಸ್ಕೃತಿಯ ಕಂಪನ್ನು ಹರಡಿದ ರಾಷ್ಟ್ರಪ್ರೇಮಿಗಳು. ಸರ್ವಸಂಘ ಪರಿತ್ಯಾಗಿ. ಸಮಾಜಸುಧಾರಕರು, ಶಿಕ್ಷಣಕ್ಷೇತ್ರದಲ್ಲಿ ಹೊಸ ವಿಚಾರಗಳನ್ನು ಅನುಷ್ಠಾನ ಮಾಡುತ್ತಿರುವವರು. ಇಂತಹವರನ್ನು ಗುರುತಿಸಿ ಈ ಸಾಲಿನ ಶ್ರೀದೇವಿ ರಮಣಮಹರ್ಷಿ ಪುರಸ್ಕಾರ ನೀಡುತ್ತಿರುವ ಹುಲಿನಾಯ್ಕರ್ ದಂಪತಿಗಳು ಅಭಿನಂದನಗೆ ಅರ್ಹರು” ಎಂದರು.

ಆಚಾರ್ಯ ಡಾ. ಎಂ.ನಾಗರಾಜ್ ಅವರಿಗೆ ಮಾಜಿ ಸಚಿವರುಗಳಾದ ಹೆಚ್. ವಿಶ್ವನಾಥ ಮತ್ತು ಎಚ್.ಎಂ. ರೇವಣ್ಣ ಅವರು ಭಿನ್ನವತ್ತಳೆ, ಫಲಕ, ಪ್ರಮಾಣಪತ್ರ, ನಗದು ಐವತ್ತು ಸಾವಿರ ರೂಪಾಯಿಗಳ ಜೊತೆ ಫಲಪುಷ್ಪಗಳನ್ನು ನೀಡಿ ಸನ್ಮಾನಿಸಿದರು. ಆಚಾರ್ಯ ಡಾ. ಎಂ. ನಾಗರಾಜ್ ಅವರ ಮೇಲೆ ಹೂವಿನ ಮಳೆಗರೆಯಲಾಯಿತು.

ಸನ್ಮಾನಕ್ಕೆ ಉತ್ತರ ನೀಡಿದ ಆಚಾರ್ಯ ಡಾ, ನಾಗರಾಜ್ ಅವರು “ನಮ್ಮ ತಂದೆ ಮರೀಗೌಡ ಅವರಿಗೆ ವೈದ್ಯನಾದ ನಾನು ನಮ್ಮ ಜನಕ್ಕೆ ಸೇವೆ ಸಲ್ಲಿಸಬೇಕು ಎಂಬ ಆಸೆಯಿತ್ತು, ನನ್ನ ಮಡದಿ ದಿವಂಗತ ಶ್ರೀಮತಿ ರೇಣುಕಾ ನಾಗರಾಜ್ ಅವರಿಗೆ ನಮ್ಮ ದುಡಿಮೆ ನಮ್ಮ ಜನರಿಗೆ ಸ್ವಲ್ಪವಾದರೂ ಮುಟ್ಟಬೇಕು ಎನ್ನುವ ಆಸೆಯಿತ್ತು. ಅವರಿಬ್ಬರೂ ನನಗೆ ಪ್ರೇರಕರು. ನಾನು ಅಮೆರಿಕಾದಲ್ಲಿದ್ದರೂ ಭಾರತೀಯ ಸಂಸ್ಕೃತಿಯ ಹೆಗ್ಗಳಿಕೆಯಾದ ಅಧ್ಯಾತ್ಮವನ್ನು ಬಿಟ್ಟಿರಲಿಲ್ಲ. ಪೂಜ್ಯ ಸ್ವಾಮಿ ಚಿನ್ಮಯಾನಂದರ ಕೃಪೆಯಿಂದ ನಾನು ಯಾವಾಗಲೂ ಅಧ್ಯಾತ್ಮದ ವಿಷಯಗಳನ್ನು ಯೋಚಿಸುತ್ತಾ ಬಂದಿದ್ದೇನೆ. ಅಂತಿಮವಾಗಿ ಕರ್ನಾಟಕ ರಾಜ್ಯದಲ್ಲಿ ಏನಾದರೂ ಮಾಡಬೇಕು ಎಂಬ ನಿರ್ಧಾರ ಮಾಡಿದ ಮೇಲೆ ಹಿರಿಯ ಐಪಿಎಸ್ ಅಧಿಕಾರಿ ಕೆಂಪಯ್ಯ ಅವರು ನನಗೆ ಸಹಾಯ ಮಾಡಿದ್ದರಿಂದ ಸುವರ್ಣಮುಖಿ ಸಂಸ್ಕೃತಿಧಾಮ ಸ್ಥಾಪಿಸಲು ಸಾಧ್ಯವಾಯಿತು. ನಮ್ಮಲ್ಲಿ 120




ಡಾ.ಆಚಾರ್ಯ ಎಂ.ನಾಗರಾಜ್ ಅವರಿಗೆ ‘ಶ್ರೀದೇವಿ ರಮಣ ಮಹರ್ಷಿ’ ಪುರಸ್ಕಾರವನ್ನು ನೀಡಿ ಸನ್ಮಾನಿಸಿದವರು ಮಾಜಿ ಸಚಿವರು, ವಿಧಾನ ಪರಿಷತ್ ಸದಸ್ಯರಾದ ಎಚ್.ವಿಶ್ವನಾಥ್ ಹಾಗೂ ಎಚ್.ಎಂ.ರೇವಣ್ಣ. ಚಿತ್ರದಲ್ಲಿ ಡಾ.ಅನಂತರಾಮು, ಡಾ. ಹುಲಿನಾಯ್ಕರ್, ಶಾಂತಾದುರ್ಗಾದೇವಿ ಮೊದಲಾದವರು ಇದ್ದಾರೆ.

ಮಕ್ಕಳು ಆರನೆಯ ತರಗತಿಯಿಂದ ಹತ್ತನೆಯ ತರಗತಿಯವರೆಗೆ ವ್ಯಾಸಂಗ ಮಾಡುತ್ತಿದ್ದಾರೆ. ನಾನು ಹೈದ್ರಾಬಾದ್ ಕರ್ನಾಟಕದ ಭಾಗಕ್ಕೆ ಹೋದಾಗ ಇನ್ನು ಅಕ್ಷರ ಸಹ ಬಾರದವರನ್ನು ನೋಡಿ ನನಗೆ ತುಂಬಾ ದುಃಖವಾಯಿತು. ದೇವರ ದಯೆಯಿಂದ ನಾವು ಅಕ್ಷರ ಕಲಿತಿದ್ದೇವೆ. ಅದರಿಂದ ನಮಗೆ ಅರಿವು ಬಂದಿದೆ. ನಮ್ಮ ಅಣ್ಣತಮ್ಮಂದಿರು ಇನ್ನು ಅಂಧಕಾರದಲ್ಲಿ ಮುಳುಗಿದ್ದಾರೆ. ಮಕ್ಕಳಿಗೆ ಶಾಲೆಯಲ್ಲಿ ಉತ್ಸಾಹ ಮೂಡಿಸುವ ಶಿಕ್ಷಣವನ್ನು ನಾವು ಕೊಡುತ್ತಿಲ್ಲ. ಅವರಿಗೆ ಪಠ್ಯವಿಷಯಗಳು ಬೇಸರ ಮೂಡಿಸಿವೆ. ಗ್ರಾಮೀಣ ಪ್ರದೇಶದ ಮಕ್ಕಳು ನನಗೆ ಆದ್ಯತೆಯ ವಿಷಯವಾಗಿದ್ದಾರೆ. ಅವರಿಗೆ ಸಂಸ್ಕಾರಭರಿತ ಶಿಕ್ಷಣ ನೀಡಬೇಕು. ಮಕ್ಕಳಲ್ಲಿ ಸಂಸ್ಕಾರ ಬೆಳೆಯುವುದಕ್ಕೆ ಸಂಸ್ಕೃತ ಭಾಷೆಯ ಕಲಿಕೆ ಅಗತ್ಯ" ಎಂದರು.

ಡಾ. ನಾಗರಾಜ್ ಅವರಿಗೆ ಸನ್ಮಾನ ಮಾಡಿದ ಮಾಜಿ ಸಚಿವರೂ ಮತ್ತು ವಿಧಾನಪರಿಷತ್ತಿನ ಸದಸ್ಯರಾದ ಹೆಚ್. ವಿಶ್ವನಾಥ್ ಅವರು ಮಾತನಾಡಿ "ಡಾ. ನಾಗರಾಜ್ ಅವರ ಸೇವೆ ಮೈಸೂರಿಗೆ ಸಲ್ಲಬೇಕಾಗಿತ್ತು. ನಮ್ಮ ಸಮಾಜದಲ್ಲಿ ಅಧ್ಯಾತ್ಮ ಸಾಧಕರನ್ನು ಮತ್ತು ಸಮಾಜಸೇವಕರನ್ನು ಸಿದ್ಧ ಮಾಡುವ ಹೊಣೆಗಾರಿಕೆಯನ್ನು ಶ್ರೀಯುತರಿಗೆ ಕೊಡಲು ತೀರ್ಮಾನ ಮಾಡಿದ್ದೆ. ಕಾರಣಾಂತರದಿಂದ ಸಾಧ್ಯವಾಗಲಿಲ್ಲ. ಇಂದು ಕೆಲಸಕ್ಕಿಂತ ಮುಂಚೆ ಪ್ರಚಾರ ಬಯಸುವ ಜನರಿದ್ದಾರೆ. ಆದರೆ ಡಾ. ಎಂ. ನಾಗರಾಜ್ ಅವರು ಅತ್ಯುತ್ತಮ ಕೆಲಸ ಮಾಡಿದ್ದರೂ ಪ್ರಚಾರ ಬಯಸಲಿಲ್ಲ. ಅವರು ತಾಂತ್ರಿಕ ಶಿಕ್ಷಣ ಓದುವ ನೂರಾರು ಮಕ್ಕಳಿಗೆ ಪ್ರತಿವರ್ಷ ವಿದ್ಯಾರ್ಥಿವೇತನ ನೀಡಿದ್ದಾರೆ. ಅವರಂತಹ ವ್ಯಕ್ತಿ ಎಲ್ಲಾ ಕಾಲಕ್ಕೂ ಅಪರೂಪ" ಎಂದರು.

ಮತ್ತೊಬ್ಬ ಅತಿಥಿ ಮಾಜಿ ಸಚಿವರೂ ಮತ್ತು ವಿಧಾನಪರಿಷತ್ತಿನ ಸದಸ್ಯರಾದ ಎಚ್. ಎಂ.ರೇವಣ್ಣ ಅವರು ಮಾತನಾಡಿ "ಆಚಾರ್ಯ ಡಾ. ಎಂ. ನಾಗರಾಜ್ ಅವರು ಈ ಎಲ್ಲಾ ಸಮಾಜಸೇವಾ ಕಾರ್ಯಗಳಿಗೆ ಯಾರಿಂದಲೂ ಹಣ ಪಡೆದಿಲ್ಲ. ತಮ್ಮ ಸ್ವಂತ ಹಣದಿಂದ ಅವರು ಈ ಕೆಲಸ ಮಾಡುತ್ತಿದ್ದಾರೆ. ಅವರು ಮಹಿಳೆಯರ ಸಬಲೀಕರಣಕ್ಕೆ ಉತ್ತಮ ತರಬೇತಿ ಶಿಬಿರಗಳನ್ನು ಏರ್ಪಡಿಸಿದ್ದರು. ಅದರಲ್ಲಿ ನಾನು ಭಾಗವಹಿಸಿದ್ದೆ. ಡಾ. ನಾಗರಾಜ್ ಅವರು ಈಗ ಪ್ರಾರಂಭಿಸಿರುವ 'ಅಕ್ಷರಾದೀಕ್ಷಾ' ಕಾರ್ಯಕ್ರಮವು ರಾಜ್ಯಕ್ಕೆ ಮಾದರಿಯಾಗಬಲ್ಲದು" ಎಂದರು.

ಕೊನೆಯಲ್ಲಿ ಕಾರ್ಯಕ್ರಮವನ್ನು ನಿರೂಪಿಸಿದ ಡಾ. ಕೆ.ಆರ್. ಕಮಲೇಶ್ ಎಲ್ಲರಿಗೂ ವಂದನೆ ಹೇಳಿದರು. ವೇದಿಕೆಯ ಮೇಲಿದ್ದು ಕಾರ್ಯಕ್ರಮ ಅಚ್ಚುಕಟ್ಟಾಗುವಂತೆ ಮಾರ್ಗದರ್ಶನ ಮಾಡಿದ ಡಾ. ಲಾವಣ್ಯ ರಮಣ ಮತ್ತು ಮಾಧ್ಯಮ ಹಾಗೂ ಇತರರೊಡನೆ ಸಂಯೋಜನಾ ಕಾರ್ಯಮಾಡಿದ ಎಂ.ಎಸ್. ಪಾಟೀಲ್ ಅವರುಗಳು ಅಭಿನಂದನಾರ್ಹರು. ಲೇಖಕರಾದ ಡಾ. ಕೆ.ಆರ್.ಕಮಲೇಶ್ ಅವರ ಮಡದಿ ಎನ್. ಭಾರತಿ ಹಾಗೂ ಅತ್ಯುತ್ತಮವಾಗಿ ಮುದ್ರಿಸಿದ ಮಾರುತಿ ಪ್ರಿಂಟರ್ಸ್‌ನ ಪ್ರಕಾಶ್ ಅವರನ್ನು ಸನ್ಮಾನಿಸಲಾಯಿತು. ಸುವರ್ಣಮುಖಿ ಸಂಸ್ಕೃತಿಧಾಮದ ಮಕ್ಕಳು ಕೊನೆಯಲ್ಲಿ ಮಾಡಿದ ಭಗವದ್ಗೀತೆಯ ಸಮೂಹ ವಾಚನ ಸಭಿಕರನ್ನು ತನ್ನತ್ತ ಸೆಳೆಯಿತು. ಇದಕ್ಕೆ ಟ್ರಸ್ಟಿ ಡಾ. ವಿಜಯಲಕ್ಷ್ಮೀ ಅವರು ಮಾರ್ಗದರ್ಶನ ನೀಡಿದರು. ⌘




ಡಾ.ಕೆ.ಆರ್.ಕಮಲೇಶ್ ರಚಿಸಿದ ಡಾ.ಆಚಾರ್ಯ ಎಂ.ನಾಗರಾಜ್ ಅವರ 'ಸೇವೆಗೆ ಮುಡಿಪಿಟ್ಟ ನಂದಾದೀಪ' ಕೃತಿಯನ್ನು ಡಾ.ಕೆ.ಅನಂತರಾಮುರವರು ಬಿಡುಗಡೆ ಮಾಡಿದರು. ವೇದಿಕೆಯಲ್ಲಿ ಗಣ್ಯರು ಉಪಸ್ಥಿತರಿದ್ದರು.

# ದೈಹಿಕ ಚಟುವಟಿಕೆಯಿಂದ ಮಾತ್ರ ಮಧುಮೇಹ ನಿಯಂತ್ರಣ ಸಾಧ್ಯ

"ಪ್ರತಿನಿತ್ಯ ದೈಹಿಕ ಚಟುವಟಿಕೆಗಳನ್ನು ರೂಢಿಸಿಕೊಳ್ಳುವುದರಿಂದ ಮಧುಮೇಹ ರೋಗವನ್ನು ನಿಯಂತ್ರಣದಲ್ಲಿ ತಡಬಹುದು ಹಾಗೂ ಸುಮಾರು ವರ್ಷಗಳ ಹಿಂದೆ ಕಡಿಮೆ ಪ್ರಮಾಣದಲ್ಲಿ ಕಾಣುತ್ತಿದ್ದ ಮಧುವೇಹ ರೋಗವಿದ್ದು, ಇತ್ತೀಚಿನ ದಿನಗಳಲ್ಲಿ ಅದರಲ್ಲೂ ಮಹಿಳೆಯರಲ್ಲಿ ಹೆಚ್ಚಾಗಿ ಮಧುಮೇಹ ಕಂಡು ಬರುತ್ತಿದೆ. ಎಲ್ಲಾ ಕೆಲಸಗಳಿಗೂ ಯಂತ್ರಗಳ ಬಳಕೆ, ದೈಹಿಕ ಶ್ರಮವಿಲ್ಲದೆ ಕೆಲಸಗಳಿಲ್ಲದ ಕಾರಣ ಮಧುಮೇಹಿಗಳ ಸಂಖ್ಯೆ ಹೆಚ್ಚಾಗಲು ಕಾರಣವಾಗಿದೆ. ನಲವತ್ತು ವರ್ಷ ಮೇಲ್ಪಟ್ಟವರು ತಪ್ಪದೇ ಆರು ತಿಂಗಳಿಗೊಮ್ಮೆ ವೈದ್ಯರ ಸಲಹೆಯಂತೆ ಮಧುಮೇಹ ಪರೀಕ್ಷೆ ಮಾಡಿಸಿಕೊಳ್ಳಬೇಕು" ಎಂದು ಶ್ರೀದೇವಿ ವೈದ್ಯಕೀಯಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಡಾ.ವಿರೂಪಾಕ್ಷಪ್ಪರವರು ಹೇಳಿದರು.

ಶ್ರೀದೇವಿ ವೈದ್ಯಕೀಯ ಮಹಾವಿದ್ಯಾಲಯದ ವತಿಯಿಂದ ಶ್ರೀದೇವಿ ಆಸ್ಪತ್ರೆಯ ಆವರಣದಲ್ಲಿ ವಿಶ್ವ ಮಧುಮೇಹ ದಿನಾಚರಣೆಯನ್ನು ಹಮ್ಮಿಕೊಳ್ಳಲಾಗಿತ್ತು. ಸಾರ್ವಜನಿಕರಿಗೆ ಆಸ್ಪತ್ರೆಯಲ್ಲಿ ಉಚಿತ ಆರೋಗ್ಯ ತಪಾಸಣಾ ಶಿಬಿರದಲ್ಲಿ ಜಿ.ಆರ್.ಬಿ.ಎಸ್, ಯೂರಿನ್ ಆಲ್ಬುಮಿನ್, ಯೂರಿಕ್ ಆಸಿಡ್ ಲೆವೆಲ್ ಎಸ್ಟಿಮೇಷನ್, ನರದೌರ್ಬಲ್ಯ ಪರೀಕ್ಷೆ, ರೆಟಿನೋಪತಿ ಸ್ಕ್ರೀನಿಂಗ್ (ಕಣ್ಣಿನ ಪರೀಕ್ಷೆ), ಡಯಟರಿ ಕೌನ್ಸಿಲಿಂಗ್ (ಆಹಾರ ಪದ್ಧತಿ) ಮುಂತಾದ ಪರೀಕ್ಷೆಗಳನ್ನು ನಡೆಸಲಾಗಿತ್ತು. ಸುಮಾರು 200 ಕ್ಕೂ ಹೆಚ್ಚಿನ ಸಾರ್ವಜನಿಕರು ಇದರ ಪ್ರಯೋಜನ ಪಡೆದರು.










ಇದೇ ಸಂದರ್ಭದಲ್ಲಿ ಶ್ರೀದೇವಿ ವೈದ್ಯಕೀಯ ಶಾಸ್ತ್ರ ವಿಭಾಗದ ಡಾ.ನವೀನ್‌ರವರು ಮಾತನಾಡುತ್ತಾ "ಮಧುಮೇಹವು ಒಂದು ದೊಡ್ಡ ಸಮಸ್ಯೆಯಾಗಿದ್ದು, ಜಗತ್ತಿನಾದ್ಯಂತ ಸಾಕಷ್ಟು ಜನರು ಈ ಸಮಸ್ಯೆಯಿಂದ ಬಳಲುತ್ತಿದ್ದಾರೆ, ರಕ್ತದಲ್ಲಿನ ಗ್ಲೂಕೋಸ್ ಅಥವಾ ಸಕ್ಕರೆಯ ಮಟ್ಟವು ಅತಿಯಾಗಿ ಹೆಚ್ಚಾದಾಗ ಈ ಕಾಯಿಲೆ ಉಂಟಾಗುತ್ತದೆ. ಇನ್ಸುಲಿನ್ ಅವಶ್ಯಕ. ಆದರೆ ದೇಹ ಸಾಕಷ್ಟು ಇನ್ಸುಲಿನ್ ತಯಾರಿಸದಿದ್ದಾಗ ದೇಹದಲ್ಲಿ ಸಕ್ಕರೆ ಅಂಶ ಹೆಚ್ಚಾಗಿ ಸಕ್ಕರೆ ಕಾಯಿಲೆ ಬರುತ್ತದೆ" ಎಂದು ತಿಳಿಸಿದರು.

ಶ್ರೀದೇವಿ ವೈದ್ಯಕೀಯ ಶಾಸ್ತ್ರ ವಿಭಾಗದ ಡಾ.ಬಾಬು ರಾಜೇಂದ್ರ ಪ್ರಸಾದ್ ಶ್ರೀದೇವಿ ಚಾರಿಟಬಲ್ ಟ್ರಸ್ಟ್‌ನ ಅಧ್ಯಕ್ಷರಾದ ಡಾ. ಎಂ.ಆರ್.ಹುಲಿನಾಯ್ಕರ್, ಶ್ರೀದೇವಿ ವೈದ್ಯಕೀಯ ಮಹಾವಿದ್ಯಾಲಯದ ವೈದ್ಯಕೀಯ ನಿರ್ದೇಶಕರಾದ ಡಾ. ರಮಣ್ ಎಂ. ಹುಲಿನಾಯ್ಕರ್, ಶ್ರೀದೇವಿ ಶಿಕ್ಷಣ ಸಂಸ್ಥೆಯ ಮಾನವ ಸಂಪನ್ಮೂಲ ವಿಭಾಗದ ನಿರ್ದೇಶಕರಾದ ಎಂ.ಎಸ್.ಪಾಟೀಲ್, ಶ್ರೀದೇವಿ ಆಸ್ಪತ್ರೆ ವೈದ್ಯಕೀಯ ಅಧೀಕ್ಷಕರಾದ ಡಾ.ಮೋಹನ್‌ಕುಮಾರ್, ಶ್ರೀದೇವಿ ವೈದ್ಯಕೀಯ ಮಹಾವಿದ್ಯಾಲಯದ ಪ್ರಾಂಶುಪಾಲರಾದ ಡಾ.ಎಂ.ಎಲ್.ಹರೇಂದ್ರ ಕುಮಾರ್ ಮೊದಲಾದವರು ಭಾಗವಹಿಸಿದ್ದರು. ⌘

# ವೈದ್ಯಕೀಯ ಕ್ಷೇತ್ರದಲ್ಲಿ ವೃತ್ತಿ ಘನತೆ

ಅಭಿಮತ



**ಡಾ. ಮನೋನ್ಮಣಿ ಎಂ.ಎಚ್.**
ಪ್ರಾಧ್ಯಾಪಕರು ಸರ್ಜರಿ ವಿಭಾಗ
(ಗ್ಯಾಸ್ಟ್ರೋಎಂಟಾರಲಜಿ)
ಶ್ರೀದೇವಿ ವೈದ್ಯಕೀಯ ಕಾಲೇಜು

ವೃತ್ತಿ ಘನತೆ ಎನ್ನುವುದು ಒಂದು ತಾತ್ವಿಕ ಸಿದ್ಧಾಂತ. ಅಂದರೆ, ಎಲ್ಲಾ ಕೆಲಸಗಳು ಸಮಾನ ಗೌರವ ಮತ್ತು ಮನ್ನಣೆಗೆ ಪಾತ್ರವಾಗುತ್ತದೆ. ಯಾವುದೇ ಉದ್ಯೋಗ ಮೇಲಾಗಲಿ ಅಥವಾ ಕೀಳಾಗಲಿ ಅಲ್ಲ ಎಂಬ ಮನೋಧರ್ಮವೇ ವೃತ್ತಿ ಘನತೆ ಎಂದು ವ್ಯಾಖ್ಯಾನಿಸಲಾಗಿದೆ. ಎಲ್ಲರೂ ತಾವು ತೊಡಗಿಸಿಕೊಂಡಿರುವ ತಮ್ಮ ವೃತ್ತಿ ಅತ್ಯಂತ ಶ್ರೇಷ್ಠ ಎಂದು ಭಾವಿಸಿಕೊಂಡಿದ್ದಾಗ ಇಂತಹ ತಾತ್ವಿಕ ಸಿದ್ಧಾಂತ ತುಂಬಾ ಚೆನ್ನಾಗಿದೆ ಎನಿಸುತ್ತದೆ.

ಜಪಾನೀಯರ ಪ್ರಕಾರ ಪ್ರತಿಯೊಬ್ಬರಲ್ಲೂ 'ಇಕಿಗಾಯಿ' (Ikigai) ಎಂಬುದು ಇರುತ್ತದೆ. ಈ 'ಇಕಿಗಾಯಿ ಎಂಬುದು ವ್ಯಕ್ತಿಯಲ್ಲಿರುವುದರಿಂದಲೇ ಆತ ಬೆಳಗ್ಗೆ ಎಚ್ಚರಗೊಂಡು ಕಾರ್ಯಪ್ರವೃತ್ತರಾಗುತ್ತಾನೆ. ಇಕಿಗಾಯಿ ಎನ್ನುವುದು 'ತುಡಿತ,' 'ಧ್ಯೇಯ,' 'ವೃತ್ತಿ ಹಾಗೂ 'ಕೌಶಲ'ಗಳ ಸಂಗಮವಾಗಿದೆ. ಇದೊಂದು ಜೀವನ ಸಿದ್ಧಾಂತ. ನಮ್ಮ ತುಡಿತ (ನಾವು ಪ್ರೀತಿಸುವಂಥದ್ದು), ಧ್ಯೇಯ (ಜಗತ್ತಿಗೆ ಅಗತ್ಯವಿರುವಂಥದ್ದು), ಕೌಶಲ (ನಾವು ನೈಪುಣ್ಯ ಹೊಂದಿರುವಂಥದ್ದು) ಹಾಗೂ ವೃತ್ತಿಯ (ನಮಗೆ ಹಣ ತಂದುಕೊಡುವಂತದ್ದು) ಸಂಗಮವನ್ನು ಇಕಿಗಾಯಿಯಲ್ಲಿ ಕಾಣಬಹುದು. ಎಲ್ಲರೂ ತಮ್ಮಲ್ಲಿ 'ಇಕಿಗಾಯಿ' ಅನ್ನು ಕಂಡುಕೊಳ್ಳಲು ಸಾಧ್ಯವಾದರೆ ಅವರ ಅಂತರಂಗದಲ್ಲಿ ಸಂತೋಷ ಹಾಗೂ ಶಾಂತಿಯಿರುವುದರ ಜೊತೆ ಸುತ್ತಮುತ್ತಲಿನಲ್ಲೂ ಅದೇ ಪ್ರಜ್ಞೆ ಬೆಳೆಸುತ್ತಾರೆ.

ವೃತ್ತಿಯಿಂದ ಶಸ್ತ್ರಚಿಕಿತ್ಸಕಿಯಾಗಿದ್ದು 'ಇಕಿಗಾಯಿ'ಯನ್ನು ನಾನು ಗ್ರಹಿಸಿದ ರೀತಿಯನ್ನು ನಿಮ್ಮೊಂದಿಗೆ ಹಂಚಿಕೊಳ್ಳುತ್ತೇನೆ. ಒಂದು ಶಸ್ತ್ರಚಿಕಿತ್ಸಾ ತಂಡವು ಒಬ್ಬ ಹಿರಿಯ ಶಸ್ತ್ರಚಿಕಿತ್ಸಕರು, ಒಬ್ಬ ಕಿರಿಯ ಶಸ್ತ್ರಚಿಕಿತ್ಸಕರು, ಒಬ್ಬ ಟ್ರೈನಿ ಶಸ್ತ್ರಚಿಕಿತ್ಸಕರು, ಅರಿವಳಿಕೆ ತಜ್ಞರು, ಶುಶ್ರೂಷಕಿ, ಒಟಿ ತಂತ್ರಜ್ಞ, ಇಂಟರ್ನಿ ಸಿ–ಆರ್ಮ್ ತಂತ್ರಜ್ಞ (C-Arm) ಸಿಎಸ್‌ಎಸ್‌ಡಿ



ಸಿಬ್ಬಂದಿ, ಆಯಾಗಳು ಮತ್ತು ವಾರ್ಡ್‌ಬಾಯ್‌ಗಳನ್ನು ಒಳಗೊಂಡಿರುತ್ತದೆ (ಇದರ ಜೊತೆಗೆ ಇನ್ನೂ ಹಲವರಿದ್ದರೂ ಸದ್ಯಕ್ಕೆ ಇಷ್ಟು ಸಾಕು) ಇಡೀ ತಂಡದ ಪ್ರಮುಖ ಗುರಿಯು ಕಾಯಿಲೆಬಾಧಿತ ವ್ಯಕ್ತಿಯನ್ನು ಸಾಧ್ಯವಾದಷ್ಟು ಕಡಿಮೆ ನೋವಿನೊಂದಿಗೆ ಚೇತರಿಸಿಕೊಳ್ಳುವಂತೆ ಮಾಡುವುದು ಹಾಗೂ ಆತ/ಆಕೆ ಸಂತೋಷದಿಂದ ಮನೆಗೆ ಮರಳುವಂತೆ ಮಾಡಬೇಕೆಂಬುದೇ ಆಗಿರುತ್ತದೆ.

ಒಂದೊಮ್ಮೆ ಈ ತಂಡದ ಆಯಾ ಅಥವಾ ವಾರ್ಡ್‌ಬಾಯ್ ಶಸ್ತ್ರಚಿಕಿತ್ಸಾ ಸಮುಚ್ಚಯವನ್ನು ಅಥವಾ ವಾರ್ಡ್‌ಗಳನ್ನು ಸ್ವಚ್ಛಗೊಳಿಸುವುದು ತಂಡದ ಇತರರ ಕೆಲಸಕ್ಕಿಂತ ಕೀಳು ಎಂದುಕೊಂಡರೆ ಆಗವರು ತಮ್ಮ ಸಾಮರ್ಥ್ಯಕ್ಕೆ ಅನುಗುಣವಾಗಿ ಕೆಲಸ ಮಾಡಲು ಸಾಧ್ಯವಾಗುವುದಿಲ್ಲ. ಇದು ಆಸ್ಪತ್ರೆಯಲ್ಲಿ ಸೋಂಕು ಹೆಚ್ಚಲು ಕಾರಣವಾಗಿ ಬಾಧಿತ ವ್ಯಕ್ತಿಯು ಆಸ್ಪತ್ರೆಯಲ್ಲೇ ಹೆಚ್ಚು ಕಾಲ ಉಳಿಯುವಂತೆ ಮಾಡಬಹುದು. ಜೊತೆಗೆ ಬಾಧಿತ ವ್ಯಕ್ತಿಯ ಬಳಲುವಿಕೆ ಹೆಚ್ಚಾಗಬಹುದು. ಅದೇ ರೀತಿಯಾಗಿ ಶಸ್ತ್ರಚಿಕಿತ್ಸಕರು ತನ್ನ ಕೆಲಸ ಇತರರ ಕೆಲಸಕ್ಕಿಂತ ಮುಖ್ಯ ಎಂದುಕೊಂಡರೆ ಆಗವರು ತಂಡದ ಇತರ ಸದಸ್ಯರಿಗೆ ಕೊಡುವ ಗೌರವ ಕಡಿಮೆಯಾಗುತ್ತದೆ. ಇದು ಕೂಡ ತಂಡದ ಸಾಮರ್ಥ್ಯ ನಷ್ಟವಾಗಲು ಕಾರಣವಾಗುತ್ತದೆ. ಇಡೀ ತಂಡವು ಸಮನ್ವಯತೆಯಿಂದ ಕೆಲಸ ಮಾಡಬೇಕು, ಯಾವುದೇ ವ್ಯಕ್ತಿ ಎಲ್ಲಾ ಕೆಲಸ ಮಾಡಲು ಸಾಧ್ಯವಾಗುವುದಿಲ್ಲ ಎಂಬುದನ್ನು ಪ್ರತಿಯೊಬ್ಬರೂ ಅರಿತಾಗ ಮಾತ್ರ ಕೆಲಸ ಸಸೂತ್ರವಾಗಿ ನಡೆಯುತ್ತದೆ. ಗುರಿಯನ್ನು ತಲುಪಲು ಸಾಧ್ಯ. ಒಂದು ತಂಡದಲ್ಲಿರುವ ಎಲ್ಲರೂ ಪರಸ್ಪರ ಗೌರವ ಹೊಂದಿರುವ ಜೊತೆಗೆ ಅಲ್ಲಿ ನಮ್ಮ ಕರ್ತವ್ಯವೇನು ಎಂಬುದನ್ನು ಸ್ಪಷ್ಟವಾಗಿ ತಿಳಿದಿರಬೇಕು. ಅಂದರೆ ತಂಡದ ಕಾರ್ಯಚಟುವಟಿಕೆಗೆ ಸಂಬಂಧಿಸಿದಂತೆ ನಮ್ಮ ಕರ್ತವ್ಯಗಳೇನು ಹಾಗೂ ಜವಾಬ್ದಾರಿಗಳೇನು ಎಂಬುದನ್ನು ಮನವರಿಕೆ ಮಾಡಿಕೊಂಡು ನಮ್ಮನ್ನು ನಾವು ಗರಿಷ್ಠ ಮಟ್ಟಕ್ಕೆ ಸುಧಾರಿಸಿಕೊಳ್ಳಬೇಕು. ಇಂತಹ ಮನೋಧೋರಣೆಯು ನಾವು ಮಾಡುವ ಕೆಲಸದಲ್ಲಿ ಸಂತೃಪ್ತಿ ಕಂಡುಕೊಳ್ಳಲು ಸಹಕಾರಿಯಾಗುತ್ತದೆ. ಜೊತೆಗೆ ನಾವು ಮನುಕುಲದ ಕಲ್ಯಾಣಕ್ಕೆ ಒಂದಿಷ್ಟಾದರೂ ಕೊಡುಗೆ ನೀಡಿದ್ದೇವೆಂಬ ಅನನ್ಯ ಭಾವದ ಸಂತೋಷವನ್ನು ಉಂಟುಮಾಡುತ್ತದೆ. ಬೇರೆಯವರು ಮಾಡುವ ಕೆಲಸದ ಬಗ್ಗೆ ನಾವು ಗೌರವ ಹೊಂದಿರಬೇಕು. ಅಷ್ಟೇ ಮುಖ್ಯವಾಗಿ, ನಾವು ಮಾಡುವ ಕೆಲಸದ ಬಗ್ಗೆಯೂ ಗೌರವ ಬೆಳೆಸಿಕೊಳ್ಳುವುದು ಮುಖ್ಯವಾಗಿರುತ್ತದೆ. ಪ್ರತಿಯೊಬ್ಬರು ತಮ್ಮ ಇಕಿಗಾಯಿಯನ್ನು ಕಂಡುಕೊಳ್ಳುತ್ತಾರೆಂದು ಆಶಿಸೋಣ! ⌘

ಕನ್ನಡಕ್ಕೆ: belaguli.venkata@gmail.com

# ಮಾಹಿತಿ ತಂತ್ರಜ್ಞಾನ ಕ್ಷೇತ್ರದಲ್ಲೊಂದು ಸಮಾಜೋಪಯೋಗಿ ಸಂಶೋಧನೆ

ಇತ್ತೀಚಿಗೆ ಮತದಾರರ ನಕಲಿಪಟ್ಟಿ ಮತ್ತು ನಕಲಿ ಆಧಾರ್ ಕಾರ್ಡ್ ಪಡೆದು ದೇಶದ ನಾಗರಿಕ ಸೌಲಭ್ಯ ಪಡೆಯುತ್ತಿರುವ ಅಕ್ರಮ ನುಸುಳುಕೋರರ ವಿಚಾರ ಜನತೆ ಚಿರಪರಿಚಿತವಾದ ವಿಷಯ. ಅದರಿಂದ ಆಡಳಿತ ವ್ಯವಸ್ಥೆಗೆ ಭಾರಿ ತಲೆನೋವು ಆಗಿರುವ ವಿಚಾರವೂ ಹೌದು! ಇಂತಹ ನಕಲಿ ಸಾಮಗ್ರಿಯನ್ನು ಕೃತಕ ಬುದ್ಧಿಮತ್ತೆ (Artifical Intelligence) ಹಾಗೂ Big Data ತಂತ್ರಜ್ಞಾನ ಬಳಸಿಕೊಂಡು ಸುಲಭವಾಗಿ ಪತ್ತೆ ಹಚ್ಚಬಹುದು ಎಂದು ತುಮಕೂರಿನ ಶ್ರೀದೇವಿ ಇಂಜಿನಿಯರಿಂಗ್ ಕಾಲೇಜಿ ಮಾಹಿತಿ ತಂತ್ರಜ್ಞಾನ ವಿಭಾಗದ ಸಂಯೋಜಿತ ಪ್ರಾಧ್ಯಾಪಕರಾದ ಡಾ. ಡಿ. ಬಸವೇಶ ಅವರು ತಮ್ಮ ಸಂಶೋಧನಾ ಪ್ರೌಢಪ್ರಬಂಧ `Soft Computational Techniques to discover unique and precise knowledge from Big-Data' ನಲ್ಲಿ ನಿರೂಪಿಸಿದ್ದಾರೆ. ಈ ಪ್ರೌಢಪ್ರಬಂಧ ಮಾಹಿತಿ ತಂತ್ರಜ್ಞಾನ ಮತ್ತು ಆಡಳಿತ ಕ್ಷೇತ್ರಕ್ಕೆ ತುಂಬಾ ಅನುಕೂಲವಾಗಲಿದೆ.

ಬೆಳಗಾವಿಯ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾನಿಲಯ ಡಾ. ಬಸವೇಶ ಅವರಿಗೆ ಈ ವಿಷಯಕ್ಕೆ ಪಿ.ಹೆಚ್‌ಡಿ. ನೀಡಿದೆ. ಡಾ. ಪಿಯೂಷ್ ಕುಮಾರ್ ಪರೇಕ್ ಅವರು ಪಿ.ಹೆಚ್‌ಡಿ. ಮಾರ್ಗದರ್ಶಕರಾಗಿದ್ದಾರೆ. ಡಾ. ಬಸವೇಶ ಅವರಿಗೆ 2022ರಲ್ಲಿ ಪಿ.ಹೆಚ್‌ಡಿ. ದೊರಕಿದೆ.

ಡಾ. ಬಸವೇಶ ಅವರ ಜನ್ಮಸ್ಥಳ ತುಮಕೂರು ತಾಲ್ಲೂಕು ಕಾಗ್ಗೆರೆ ಗ್ರಾಮ. ಶ್ರೀಯುತರ ತಂದೆ ಕೆ.ಎಲ್.ದೇವರಾಜಯ್ಯ.



ತಾಯಿ ಡಿ ಸುನಂದ. ಪ್ರಾಥಮಿಕ ಶಿಕ್ಷಣವನ್ನು ಅಲ್ಲೇ ಮುಗಿಸಿದ್ದಾರೆ.

ಡಾ. ಬಸವೇಶ ಅವರು ಒಂದರಿಂದ ಏಳನೆಯ ತರಗತಿಯ ತನಕದ ಶಿಕ್ಷಣವನ್ನು ಮಾತೃಭಾಷೆ ಕನ್ನಡ ಮಾಧ್ಯಮದಲ್ಲಿ ಮಾಡಿದ್ದಾರೆ. ಸಿದ್ಧಾರ್ಥ ತಾಂತ್ರಿಕ ಶಿಕ್ಷಣ ಸಂಸ್ಥೆಯಲ್ಲಿ ಬಿ.ಇ. ಹಾಗೂ ನಿಟ್ಟೆಯ ಎನ್‌ಎಂಎಎಂಜೆಐ ಸಂಸ್ಥೆಯಿಂದ ಎಂ.ಟೆಕ್ ಪದವಿ ಪಡೆದಿದ್ದಾರೆ. 2011ರಿಂದ ಶ್ರೀದೇವಿ ಇಂಜಿನಿಯರಿಂಗ್ ಕಾಲೇಜಿನಲ್ಲಿ ಮಾಹಿತಿ ತಂತ್ರಜ್ಞಾನ ವಿಭಾಗದಲ್ಲಿ ಬೋಧನಾ ವೃತ್ತಿ ಕೈಗೊಂಡಿದ್ದಾರೆ. ಅವರ ಶ್ರೀಮತಿ ರಮ್ಯ ಬಸವೇಶ. ಮಗ ಜಾನವ್. ಡಾ. ಬಸವೇಶ ಅವರಿಗೆ ಬೋಧನೆ ಮತ್ತು ಸಂಶೋಧನೆಯಲ್ಲಿ ಸಮಾನ ಆಸಕ್ತಿಯಿದೆ.

ಮೇಲ್ basavesha@gmail.com
Mob 9742504097 ⌘

# ಶ್ರೀದೇವಿ ಶಿಕ್ಷಣ ಸಂಸ್ಥೆಯ ಕೌಶಲ್ಯಾಭಿವೃದ್ಧಿಗಾಗಿ ವಿವಿಧ ಕಂಪನಿಗಳೊಂದಿಗೆ ಒಡಂಬಡಿಕೆ ಸಹಿ

"ಶ್ರೀದೇವಿ ಸಂಸ್ಥೆಯ ವಿದ್ಯಾರ್ಥಿಗಳ ಬೇಡಿಕೆ ಹಾಗೂ ಅಗತ್ಯತೆಗೆ ಅನುಸಾರವಾಗಿ ದೇಶೀಯ ಹಾಗೂ ಅಂತರರಾಷ್ಟ್ರೀಯ ಉದ್ಯೋಗಾವಕಾಶಗಳನ್ನು ಈ ಒಪ್ಪಂದದ ಮೂಲಕ ಒದಗಿಸಿಕೊಡಲು ಸಾಧ್ಯವಾಗಲಿದೆ. ಈಗಾಗಲೇ ಪ್ರಪಂಚದಾದ್ಯಂತ ಶ್ರೀದೇವಿ ಸಂಸ್ಥೆಯ ವಿವಿಧ ಕಾಲೇಜುಗಳ ವಿದ್ಯಾರ್ಥಿಗಳು ಉನ್ನತ ಮಟ್ಟದ ಸಂಸ್ಥೆಗಳೊಂದಿಗೆ ಕಾರ್ಯ ನಿರ್ವಹಿಸುತ್ತಿದ್ದು ಇನ್ನೂ ಹೆಚ್ಚಿನ ವಿದ್ಯಾರ್ಥಿಗಳು ಮುಂಬರುವ ದಿನಗಳಲ್ಲಿ ಹೆಚ್ಚಿನ ಅವಕಾಶಗಳನ್ನು ಪಡೆದುಕೊಳ್ಳಲು ಈ ಒಡಂಬಡಿಕೆಯಿಂದ ಅನುಕೂಲವಾಗುತ್ತದೆ ಎಂದು ಶ್ರೀದೇವಿ ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾದ ಡಾ.ಎಂ.ಆರ್. ಹುಲಿನಾಯ್ಕರ್‌ರವರು ತಿಳಿಸಿದರು.

ನಗರದ ಶಿರಾರಸ್ತೆಯ ಶ್ರೀದೇವಿ ಶಿಕ್ಷಣ ಸಂಸ್ಥೆಯ ವತಿಯಿಂದ ವಿವಿಧ ಕಂಪನಿಗಳೊಂದಿಗೆ ವಿದ್ಯಾರ್ಥಿಗಳ ಕೌಶಲ್ಯ ಅಭಿವೃದ್ಧಿ ಒಡಂಬಡಿಕೆ ಸಹಿ ಮಾಡುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಶ್ರೀದೇವಿ ಶಿಕ್ಷಣ ಸಂಸ್ಥೆಯ ಮಾನವ ಸಂಪನ್ಮೂಲ ನಿರ್ದೇಶಕರಾದ ಎಂ.ಎಸ್.ಪಾಟೀಲ್‌ರವರು ಮಾತನಾಡುತ್ತಾ "ಶ್ರೀದೇವಿ ಸಂಸ್ಥೆಯೂ ತನ್ನಲ್ಲಿ ಕಲಿತ ಎಲ್ಲಾ ವಿದ್ಯಾರ್ಥಿಗಳಿಗೂ ಅಗತ್ಯ ಸಲಹೆ, ಸಹಕಾರಗಳನ್ನು ನೀಡಿ ಕೌಶಲ್ಯ ಅಭಿವೃದ್ಧಿ ಉದ್ಯೋಗಾವಕಾಶಗಳನ್ನು ನಿರ್ಮಿಸುವ ಎಲ್ಲಾ ಅವಕಾಶಗಳನ್ನು ಮುಕ್ತವಾಗಿ ಪ್ರೋತ್ಸಾಹಿಸುತ್ತದೆ" ಎಂದರು.

ಇದೇ ಸಂದರ್ಭದಲ್ಲಿ ಶ್ರೀದೇವಿ ಚಾರಿಟಬಲ್ ಟ್ರಸ್ಟಿಯಾದ ಶ್ರೀಮತಿ ಅಂಬಿಕಾ ಎಂ ಹುಲಿನಾಯ್ಕರ್, ಶ್ರೀದೇವಿ ಕಾಲೇಜಿನ ಆಡಳಿತಾಧಿಕಾರಿಯಾದ ಪ್ರೊ.ಟಿ.ವಿ.ಬ್ರಹ್ಮದೇವಯ್ಯ, ಪ್ರೊ.ಮುಬಾರಕ್, ಪ್ರೊ.ಗಿರೀಶ್ ಹಾಗೂ ಬೋಧಕ, ಬೋಧಕೇತರ ಸಿಬ್ಬಂದಿ ವರ್ಗದವರು, ವಿದ್ಯಾರ್ಥಿ– ವಿದ್ಯಾರ್ಥಿನಿಯರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ⌘



**ಚಿತ್ರದಲ್ಲಿ ಶ್ರೀದೇವಿ ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾದ ಡಾ.ಎಂ.ಆರ್.ಹುಲಿನಾಯ್ಕರ್, ಎಂ.ಎಸ್.ಪಾಟೀಲ್, ಶ್ರೀಮತಿ ಅಂಬಿಕಾ ಎಂ ಹುಲಿನಾಯ್ಕರ್, ಆಡಳಿತಾಧಿಕಾರಿಯಾದ ಪ್ರೊ.ಟಿ.ವಿ.ಬ್ರಹ್ಮದೇವಯ್ಯ, ಪ್ರೊ.ಮುಬಾರಕ್, ಪ್ರೊ. ಗಿರೀಶ್ ಅವರುಗಳು ಭಾಗವಹಿಸಿದ್ದರು.**

# ಕರ್ನಾಟಕದ ಸಾಂಸ್ಕೃತಿಕ ಪರಂಪರೆಗೆ ಕನಕದಾಸರ ಕೊಡುಗೆ ಅನನ್ಯ

"ಕನಕದಾಸರು ಯಾವುದೇ ಒಂದು ಜಾತಿಗೆ ಸೀಮಿತರಾದವರಲ್ಲ, ಜಾತಿ ವ್ಯವಸ್ಥೆಯ ವಿರುದ್ಧ ಹೋರಾಡಿದ್ದ ಅವರನ್ನು ಒಂದೊಂದು ಜಾತಿಗೆ ಸೀಮಿತಗೊಳಿಸಿ, ಅವರ ಕೊಡುಗೆಯನ್ನು ಸಂಕುಚಿತ ದೃಷ್ಟಿಯಿಂದ ನೋಡುವ ಕಾಲ ಬಂದಿದೆ. ವಿದ್ಯಾವಂತರಾದ ನಾವು ಸಂಕುಚಿತ ಮನೋಭಾವನೆಯನ್ನು ಬೆಳೆಸಿಕೊಂಡಿದ್ದೇವೆ. ಬುದ್ಧ, ಬಸವಣ್ಣನವರ ಕಾಲದಿಂದಲೂ ಇತ್ತೀಚಿಗೆ ಕುವೆಂಪು ಕಾಲದವರೆಗೂ ನಾವು ಸಂತರನ್ನು ಆಯಾ ಜಾತಿಗೆ ಸೀಮಿತಗೊಳಿಸಿದ್ದೇವೆ. ಆ ಮಾರ್ಗಬಿಟ್ಟು ಮಹಾಪುರುಷರ ಆದರ್ಶ ಆಶಯಗಳನ್ನು ಆಚರಣೆಗೆ ತರುವ ಮೂಲಕ ಸಮಾಜಕ್ಕೆ ಸಾಧುಸಂತರ ಕೊಡುಗೆಗಳನ್ನು ಸ್ಮರಿಸಬೇಕು. ಕನಕದಾಸರ ಆಶಯದಂತೆ ಕುಲಕುಲ ಎಂದು ಕಚ್ಚಾಡದೆ ಒಗ್ಗಟ್ಟಿನಿಂದ ಸಾಗಬೇಕು" ಎಂದು ಶ್ರೀದೇವಿ ಚಾರಿಟಬಲ್ ಟ್ರಸ್ಟ್ ಅಧ್ಯಕ್ಷರಾದ ಡಾ.ಎಂ.ಆರ್.ಹುಲಿನಾಯ್ಕರ್‌ರವರು ಶ್ರೀದೇವಿ ವಿದ್ಯಾಸಂಸ್ಥೆಯಲ್ಲಿ ಕನಕದಾಸರ ಜಯಂತಿ ಸಂದರ್ಭದಲ್ಲಿ ಅಭಿಪ್ರಾಯಪಟ್ಟರು. ಪ್ರಜಾಪಗ್ರತಿ ಪತ್ರಿಕೆ ನಾಗಣ್ಣ, ಮಧುನಾಗಣ್ಣ, ಡಾ. ರಮಣ ಹುಲಿನಾಯ್ಕರ್, ಎಂ.ಎಸ್. ಪಾಟೀಲ್ ಡಾ. ಲಾವಣ್ಯ ರಮಣ, ಡಾ. ಚೆನ್ನಮಲ್ಲಯ್ಯ ಶ್ರೀ ಕಾಳಿದಾಸ ಚಾರಿಟಬಲ್ ಟ್ರಸ್ಟ್‌ನ ಅಧ್ಯಕ್ಷರಾದ ಸಿ. ಪುಟ್ಟರಾಜು, ಡಾ.ಈಶ್ವರಯ್ಯ ಅವರುಗಳು ಸಮಾರಂಭದಲ್ಲಿ ಭಾಗವಹಿಸಿದ್ದರು. ⌘



ನಗರದ ಶ್ರೀದೇವಿ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಆಸ್ಪತ್ರೆಯ ವತಿಯಿಂದ 535ನೇ ಕನಕದಾಸ ಜಯಂತಿ ಆಚರಣೆ. ಚಿತ್ರದಲ್ಲಿ ಡಾ.ಎಂ.ಆರ್.ಹುಲಿನಾಯ್ಕರ್, ಡಾ.ಚೆನ್ನಮಲ್ಲಯ್ಯ, ಪ್ರಜಾಪ್ರಗತಿ ದಿನಪತ್ರಿಕೆಯ ಸಂಪಾದಕರಾದ ಎಸ್.ನಾಗಣ್ಣ, ಉಪಸಂಪಾದಕರಾದ ಮಧುಕರ್, ಕಾಳಿದಾಸ ಚಾರಿಟಬಲ್ ಟ್ರಸ್ಟ್ ಅಧ್ಯಕ್ಷರಾದ ಸಿ.ಪುಟ್ಟರಾಜು ಮತ್ತು ಡಾ.ಟಿ.ಎ.ಈಶ್ವರಯ್ಯ, ಅವರುಗಳಿದ್ದಾರೆ.

# ಸ್ನಾತಕೋತ್ತರ ಕೇಂದ್ರಕ್ಕೆ ಹೊಸ ವಿದ್ಯಾರ್ಥಿಗಳಿಗೆ ಸ್ವಾಗತ

**ವಿದ್ಯಾರ್ಥಿ ತನ್ನ ಭವಿಷ್ಯದ ಬಗ್ಗೆ ಕನಸನ್ನು ನನಸಾಗಿಸಿಕೊಂಡಾಗ ಯಶಸ್ಸು ಗಳಿಸುತ್ತಾನೆ. ಉತ್ತಮ ಫಲಿತಾಂಶ ಪಡೆದವರು ಉದ್ಯೋಗವನ್ನು ಸುಲಭವಾಗಿ ಪಡೆಯಲು ಸಾಧ್ಯವಾಗುತ್ತದೆ. ಉತ್ತಮ ಗುಣಮಟ್ಟದ ಶಿಕ್ಷಣ ನೀಡುವುದರಿಂದ ಯಶಸ್ಸಿನ ಹಾದಿ ತಲುಪಲು ಸಾಧ್ಯವಾಗುತ್ತದೆ.**

"ವಿದ್ಯಾರ್ಥಿಗಳು ತಮ್ಮ ಜೀವನದಲ್ಲಿ ಗುರಿಯೊಂದನ್ನು ಇಟ್ಟುಕೊಂಡು ಮುನ್ನಡೆದರೆ ಏನು ಬೇಕಾದರೂ ಸಾಧಿಸಬಹುದು. ಆತ್ಮವಿಶ್ವಾಸ ಬೆಳೆಸಿಕೊಂಡಾಗ ಮಾತ್ರ ತಮ್ಮ ಯಶಸ್ಸಿನ ಮೆಟ್ಟಿಲನ್ನು ಏರಲು ಹಾಗೂ ಉಜ್ವಲ ಭವಿಷ್ಯ ರೂಪಿಸಿಕೊಳ್ಳಲು ಸಾಧ್ಯವಾಗುತ್ತದೆ' ಎಂದು ತುಮಕೂರಿನ ತಹಸೀಲ್ದಾರ್ ಕಾವ್ಯಾ ಹೇಳಿದರು.

ಶ್ರೀದೇವಿ ಪದವಿ ಕಾಲೇಜು ಮತ್ತು ಶ್ರೀದೇವಿ ಸ್ನಾತಕೋತ್ತರ ಕೇಂದ್ರವು ಹೊಸ ವಿದ್ಯಾರ್ಥಿಗಳಿಗೆ ಏರ್ಪಡಿಸಿದ್ದ ಸ್ವಾಗತ ಸಮಾರಂಭದಲ್ಲಿ ಮಾತನಾಡಿದ ಅವರು, ವಿದ್ಯಾರ್ಥಿಗಳು ವಿದ್ಯಾಭ್ಯಾಸಕ್ಕೆ ಯಾವ ರೀತಿಯ ಪ್ರಾಮುಖ್ಯತೆ ನೀಡಬೇಕು ಹಾಗೂ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಎದುರಿಸಲು ಯಾವ ರೀತಿ ತಯಾರಿ ನಡೆಸಬೇಕು. ಯು.ಪಿ.ಎಸ್.ಸಿ ಮತ್ತು ಕೆ.ಪಿ.ಎಸ್.ಸಿ ಪರೀಕ್ಷೆಗಳನ್ನು ಯಾವ ರೀತಿ ಅಧ್ಯಯನ ನಡೆಸಬೇಕು ಎಂಬ ಕುರಿತು ಮಾಹಿತಿ ನೀಡಿದರು.

"ವಿದ್ಯಾರ್ಥಿ ತನ್ನ ಭವಿಷ್ಯದ ಬಗ್ಗೆ ಕನಸನ್ನು ನನಸಾಗಿಸಿಕೊಂಡಾಗ ಯಶಸ್ಸು ಗಳಿಸುತ್ತಾನೆ. ಉತ್ತಮ ಫಲಿತಾಂಶ ಪಡೆದವರು ಉದ್ಯೋಗವನ್ನು ಸುಲಭವಾಗಿ ಪಡೆಯಲು ಸಾಧ್ಯವಾಗುತ್ತದೆ. ಉತ್ತಮ ಗುಣಮಟ್ಟದ ಶಿಕ್ಷಣ ನೀಡುವುದರಿಂದ ಯಶಸ್ಸಿನ ಹಾದಿ ತಲುಪಲು ಸಾಧ್ಯವಾಗುತ್ತದೆ" ಎಂದು ಶ್ರೀದೇವಿ ಸಂಸ್ಥೆಯ ಮಾನವ ಸಂಪನ್ಮೂಲ ವಿಭಾಗದ ನಿರ್ದೇಶಕರಾದ ಎಂ.ಎಸ್.ಪಾಟೀಲ್ ಅವರು ತಿಳಿಸಿದರು.

ಕಾರ್ಯಕ್ರಮ ಉದ್ಘಾಟಿಸಿದ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರು ಮತ್ತು ಗಾಯಕರಾದ ಡಾ. ಅಕ್ಕೈ ಪದ್ಮಶಾಲಿ ಅವರು, "ವಿದ್ಯಾರ್ಥಿಗಳು ಅತ್ಮವಿಶ್ವಾಸ, ಕೌಶಲ್ಯ, ಶ್ರದ್ಧೆ, ಸಮಯಪ್ರಜ್ಞೆಯನ್ನು ಮೈಗೂಡಿಸಿಕೊಂಡಾಗ ಮಾತ್ರ ಯಶಸ್ಸನ್ನು ಸಾಧಿಸಬಹುದು." ಎಂದರು.

ಶ್ರೀದೇವಿ ಪದವಿ ಮತ್ತು ಸ್ನಾತಕೋತ್ತರ ಕೇಂದ್ರದ ಪ್ರಾಂಶುಪಾಲರಾದ ಮುಬಾರಕ್ ಅವರು, ಸಮಯಪಾಲನೆ, ಜವಾಬ್ದಾರಿ, ನೈಪುಣ್ಯತೆ, ಜೀವನದ ಮುಂದಿನ ಸವಾಲುಗಳ ಕುರಿತು ವಿದ್ಯಾರ್ಥಿಗಳಿಗೆ ಮನದಟ್ಟಾಗುವಂತೆ ಮಾರ್ಗದರ್ಶನ ನೀಡಿದರು.

ಶ್ರೀದೇವಿ ಕಾಲೇಜಿನ ಆಡಳಿತಾಧಿಕಾರಿ ಟಿ.ವಿ.ಬ್ರಹ್ಮದೇವಯ್ಯ ಅವರು ಮಾತನಾಡಿದರು. ಈ ಸಂದರ್ಭ ಪ್ರೊ.ಚಂದ್ರಿಕಾ, ಪ್ರೊ.ಆಷಿಯಾಭಾನು, ಪ್ರೊ.ಬಾಸ್ಕರ್, ಪ್ರೊ. ವತ್ಸಲ, ಪ್ರೊ.ಸಾರೀಯಾ ಖಾನಂ, ಪ್ರೊ. ರಾಘವೇಂದ್ರ ಜಟ್ಟಣ ಹಾಗೂ ಬೋಧಕ, ಬೋಧಕೇತರ ಸಿಬ್ಬಂದಿ ಮತ್ತು ವಿದ್ಯಾರ್ಥಿ-ವಿದ್ಯಾರ್ಥಿನಿಯರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ⌘




ಶ್ರೀದೇವಿ ಪದವಿ ಕಾಲೇಜು ಮತ್ತು ಶ್ರೀದೇವಿ ಸ್ನಾತಕೋತ್ತರ ಕೇಂದ್ರದ ವತಿಯಿಂದ ಶ್ರೀಆಗಮನ 2022 ನ.24 ರಂದು ಗುರುವಾರ ಬೆಳಿಗ್ಗೆ 10 ಗಂಟೆಗೆ ಶ್ರೀದೇವಿ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಆಸ್ಪತ್ರೆಯ ಅಡಿಟೋರಿಯಂ ಸಭಾಂಗಣದಲ್ಲಿ ಸ್ವಾಗತ ಸಮಾರಂಭವನ್ನು ಹಮ್ಮಿಕೊಳ್ಳಲಾಗಿತ್ತು. ಚಿತ್ರದಲ್ಲಿ ಶ್ರೀದೇವಿ ಸಂಸ್ಥೆಯ ಮಾನವ ಸಂಪನ್ಮೂಲ ವಿಭಾಗದ ನಿರ್ದೇಶಕರಾದ ಎಂ.ಎಸ್. ಪಾಟೀಲ್, ಬೆಂಗಳೂರಿನ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರು, ಗಾಯಕರಾದ ಡಾ. ಅಕ್ಕೈ ಪದ್ಮಶಾಲಿ, ತುಮಕೂರು ವಿದ್ಯಾರ್ಥಿನಿಯರ ಅಲ್ಯುಮಿನಿ ಹಾಗೂ ತಹಸೀಲ್ದಾರ್‌ರಾದ ಶ್ರೀಮತಿ ಕಾವ್ಯ, ಶ್ರೀದೇವಿ ಕಾಲೇಜಿನ ಆಡಳಿತಾಧಿಕಾರಿಯಾದ ಟಿ.ವಿ.ಬ್ರಹ್ಮದೇವಯ್ಯ,




ಇತ್ತೀಚಿಗೆ ನಡೆದ ಕೆ.ಪಿ.ಎಸ್.ಸಿ. ಪರೀಕ್ಷೆಯಲ್ಲಿ ಉತ್ತೀರ್ಣರಾದ ಕೆ.ಎ.ಎಸ್. ಅಧಿಕಾರಿಯಾದ ಶ್ರೀದೇವಿ ಶಿಕ್ಷಣ ಸಂಸ್ಥೆಯಲ್ಲಿ ವ್ಯಾಸಂಗ ಮಾಡಿದ ಹಾಗೂ ಕೆಲಸ ನಿರ್ವಹಿಸಿದ್ದ ಶ್ರೀಮತಿ ಕಾವ್ಯರವರಿಗೆ ಶ್ರೀದೇವಿ ಚಾರಿಟಬಲ್ ಟ್ರಸ್ಟ್‌ನ ವತಿಯಿಂದ ಸನ್ಮಾನಿಸಲಾಗಿತ್ತು. ಶ್ರೀದೇವಿ ಸಂಸ್ಥೆಯ ಮಾನವ ಸಂಪನ್ಮೂಲ ವಿಭಾಗದ ನಿರ್ದೇಶಕರಾದ ಎಂ.ಎಸ್.ಪಾಟೀಲ್, ಆಡಳಿತಾಧಿಕಾರಿಯಾದ ಟಿ.ವಿ.ಬ್ರಹ್ಮದೇವಯ್ಯ, ಪ್ರಾಂಶುಪಾಲರಾದ ಪ್ರೊ.ಮುಬಾರಕ್ ಮುಂತಾದವರು ಶುಭ ಹಾರೈಸಿದರು.

# ಶ್ರೀದೇವಿ ಶಿಕ್ಷಣ ಸಂಸ್ಥೆಯ ಆವರಣದಲ್ಲಿ

# ಶ್ರೀ ದುರ್ಗಾಂಬಿಕಾ ತಾಯಿ

ಅರ್ಚನೆ



**ಚಂದ್ರಶೇಖರ್ ಪನೇರು**
ಅರ್ಚಕರು
ಶ್ರೀ ದುರ್ಗಾಂಬಿಕಾ ದೇವಸ್ಥಾನ

**ನವರಾತ್ರಿಯ ಆಚರಣೆಗೆ ಅಧ್ಯಾತ್ಮದ ಮಹತ್ವವೂ ಇದೆ. ನವರಾತ್ರಿಯ ಒಂಬತ್ತು ದಿನಗಳಲ್ಲಿ ಮೊದಲ ಮೂರು ದಿನ ತಮೋಗುಣವನ್ನು ಕಡಿಮೆ ಮಾಡಿಕೊಳ್ಳಲು ಮಹಾಕಾಳಿಯನ್ನು ಪೂಜಿಸಬೇಕು. ನಂತರದ ಮೂರು ರಜೋಗುಣವನ್ನು ವೃದ್ಧಿಸಿಕೊಳ್ಳಲು ಮಹಾಲಕ್ಷ್ಮಿಯನ್ನು ಪೂಜಿಸಬೇಕು. ಕೊನೆಯ ಮೂರುದಿನ ಸತ್ತ್ವಗುಣಗಳು ಬೆಳೆಯಲು ಮಹಾಸರಸ್ವತಿಯನ್ನು ಪೂಜೆ ಮಾಡಬೇಕು.**



ಕಾಶ್ಮೀರದಿಂದ ಕನ್ಯಾಕುಮಾರಿಯ ತನಕ ಶ್ರದ್ಧಾಭಕ್ತಿಯಿಂದ ಆರಾಧಿಸುವ 'ನವರಾತ್ರಿ ಹಬ್ಬಕ್ಕೆ' ತನ್ನದೇ ಆದ ವೈಶಿಷ್ಟ್ಯಗಳಿವೆ. ಇದೊಂದು ಶಕ್ತಿಯ ಆರಾಧನೆ ಹಬ್ಬ. ಧಾರ್ಮಿಕ ಮತ್ತು ಸಾಂಸ್ಕೃತಿಕ ಮಹತ್ವವನ್ನು ಮೊದಲಿನಿಂದಲೂ ನವರಾತ್ರಿ ಆಚರಣೆಗೆ ಕೊಡಲಾಗಿದೆ.

ವಿಜಯನಗರ ಸಾಮ್ರಾಜ್ಯವನ್ನು ವೈಭವದಿಂದ ಆಳಿದ ದೊರೆಗಳು ಮತ್ತು ಮೈಸೂರಿನ ಸಾಂಸ್ಕೃತಿಕ ಪರಂಪರೆಗೆ ವಿಶ್ವಮಾನ್ಯತೆ ತಂದುಕೊಟ್ಟ ಮೈಸೂರು ಅರಸರು ನವರಾತ್ರಿ ಉತ್ಸವ ಅರ್ಥಾತ್ ದಸರಾ ಮಹೋತ್ಸವವನ್ನು ತಮ್ಮ ಸಾಮ್ರಾಜ್ಯದ ಪ್ರಮುಖ ಸಾಂಸ್ಕೃತಿಕ ಘಟನೆ ಎಂದು ಭಾವಿಸಿದ್ದರು.

ತಾಯಿ ಶ್ರೀ ಚಾಮುಂಡೇಶ್ವರಿದೇವಿ ನವರಾತ್ರಿ ಸಂದರ್ಭದಲ್ಲಿ ಮಹಿಷಾಸುರ ಎಂಬ ರಾಕ್ಷಸನನ್ನು ಕೊಂದು ಮಹಿಷಾಸುರ ಮರ್ದಿನಿಯಾಗಿರುವುದರಿಂದ ಆಕೆಯನ್ನು ಭಕ್ತಿಯಿಂದ ಈ ಸಂದರ್ಭದಲ್ಲಿ ಪೂಜಿಸಲಾಗುತ್ತದೆ. ದಸರಾದ ಹತ್ತನೆಯ ದಿನ ಮಹಾದುರ್ಗೆ ರಾಕ್ಷಸನ್ನು ಕೊಂದು ವಿಜಯ ಸಾಧಿಸುತ್ತಾಳೆ.

ವಿಜಯದಶಮಿಗೆ ಮತ್ತಷ್ಟು ಧಾರ್ಮಿಕ ಮಹತ್ವವಿರುವುದನ್ನು ನಮ್ಮಲ್ಲಿನ ಸಾಹಿತ್ಯ ಕೃತಿಗಳು ಸ್ಪಷ್ಟಪಡಿಸುತ್ತವೆ. ತ್ರೇತ್ರಾಯುಗದಲ್ಲಿ ಶ್ರೀರಾಮ ರಾವಣಾಸುರನನ್ನು ಕೊಂದ ದಿನವನ್ನು ವಿಜಯದಶಮಿಯನ್ನಾಗಿ ಕೂಡ ಆಚರಿಸುವ ಪದ್ಧತಿಯಿದೆ. ದ್ವಾಪರಯುಗದಲ್ಲಿ ವಿರಾಟನ ರಾಜಧಾನಿಯಲ್ಲಿ ವೇಷ ಮರೆಸಿಕೊಂಡಿದ್ದ ಪಾಂಡವರು ತಮ್ಮ ನಿಜ ಸ್ವರೂಪವನ್ನು ಕಂಡುಕೊಂಡ ದಿನವಿದು. ಅಂದೇ ಅರ್ಜುನ ಕೌರವರು ಹಿಡಿದಿದ್ದ ವಿರಾಟರಾಯನ ಗೋವುಗಳನ್ನು ಬಿಡಿಸುತ್ತಾನೆ. ಕೌರವರ ಮೇಲೆ ದಿಗ್ವಿಜಯ ಸಾಧಿಸಿದ ಅರ್ಜುನನ ಸಾಹಸವನ್ನು ಜ್ಞಾಪಕ ಮಾಡಿಕೊಳ್ಳಲು ಇದೊಂದು ಸುಸಮಯ. ಆತನ ವಿಜಯವನ್ನು ವಿಜಯದಶಮಿಯಂದು ಆಚರಿಸಲಾಗುತ್ತದೆ.

ನವರಾತ್ರಿಯ ಆಚರಣೆಗೆ ಅಧ್ಯಾತ್ಮದ ಮಹತ್ವವೂ ಇದೆ. ನವರಾತ್ರಿಯ ಒಂಬತ್ತು ದಿನಗಳಲ್ಲಿ ಮೊದಲ ಮೂರು ದಿನ ತಮೋಗುಣವನ್ನು ಕಡಿಮೆ ಮಾಡಿಕೊಳ್ಳಲು ಮಹಾಕಾಳಿಯನ್ನು ಪೂಜಿಸಬೇಕು. ನಂತರದ ಮೂರು ರಜೋಗುಣವನ್ನು ವೃದ್ಧಿಸಿಕೊಳ್ಳಲು ಮಹಾಲಕ್ಷ್ಮಿಯನ್ನು ಪೂಜಿಸಬೇಕು. ಕೊನೆಯ ಮೂರುದಿನ ಸತ್ತ್ವಗುಣಗಳು ಬೆಳೆಯಲು ಮಹಾಸರಸ್ವತಿಯನ್ನು ಪೂಜೆ ಮಾಡಬೇಕು ಎಂದು ಹೇಳಲಾಗುತ್ತದೆ.

ದೇವಿಪುರಾಣದಲ್ಲಿ ವರ್ಣಿತವಾಗಿರುವ 'ನವದುರ್ಗೆಯರು' ಹೀಗಿದ್ದಾರೆ. ಮೊದಲನೆಯವರು ಶೈಲಪುತ್ರಿ, ಎರಡನೆಯವರು ಬ್ರಹ್ಮಚಾರಿಣಿ, ಮೂರನೆಯವರು ಚಂದ್ರಘಂಟಾ, ನಾಲ್ಕನೆಯವರು ಕೂಷ್ಮಾಂಡಾ, ಐದನೆಯವರು ಸ್ಕಂದಮಾತ, ಆರನೆಯವರು ಕಾತ್ಯಾಯಿನಿ, ಏಳನೆಯವರು ಕಾಳರಾತ್ರಿ ಎಂಟನೆಯವರು ಮಹಾಗೌರಿ ಹಾಗೂ ಒಂಬತ್ತನೆಯವರು ಸಿದ್ಧದಾತ್ರಿ.

ನವರಾತ್ರಿಯ ಮೊದಲ ಒಂಬತ್ತು ದಿನಗಳು ಹತ್ತು ದಿಕ್ಕುಗಳು ದೇವಿಯ ನಿಯಂತ್ರಣದಲ್ಲಿರುತ್ತದೆ. ಹತ್ತು ದಿಕ್ಪಾಲಕರು ಹಾಗೂ ಗಣಗಳು ದೇವಿಯ ನಿಯಮಕ್ಕೊಳಪಟ್ಟಿರುತ್ತಾರೆ. ಈ ಸಂದರ್ಭದಲ್ಲಿ ಭಕ್ತರು ಕೋರಿಕೊಳ್ಳುವ ಎಲ್ಲಾ ಬೇಡಿಕೆಗಳನ್ನು ಶ್ರೀ ದುರ್ಗಾಂಬಿಕಾದೇವಿ ಈಡೇರಿಸುತ್ತಾಳೆ ಎಂದು ಶಾಸ್ತ್ರಗಳು ಹೇಳಿವೆ.

ದೇವಿಪುರಾಣದಲ್ಲಿ ಹೇಳಿರುವ ದೇವಿಯ ಒಂಬತ್ತು ಸ್ವರೂಪಗಳನ್ನು ಆಯಾಯ ದಿನದ ಮಹತ್ವಕ್ಕನುಗುಣವಾಗಿ ಆಚರಿಸಲಾಯಿತು. ಸೆಪ್ಟೆಂಬರ್ 26 ರಿಂದ ಪ್ರಾರಂಭವಾದ ನವರಾತ್ರಿ ಪೂಜೆ ಅಕ್ಟೋಬರ್ 5ರ ತನಕ ನಿರ್ವಿಘ್ನವಾಗಿ ನಡೆಯಿತು. ಅಶ್ವಜಶುಕ್ಲ ಪಾಡ್ಯದ ದಿನದಂದು ನವರಾತ್ರಿಯ ಪ್ರಾರಂಭ. ಅಂದು ಶೈಲಪುತ್ರಿಯ ಪೂಜೆಯಿಂದ ನವರಾತ್ರಿ ಪೂಜಾ ಕಾರ್ಯಗಳು ಆರಂಭವಾಗುತ್ತವೆ. ಶ್ರೀ ದುರ್ಗಾಂಬಿಕಾದೇವಿಗೆ ಅಂದು ಶ್ರೀ ಅನ್ನಪೂರ್ಣೇಶ್ವರಿ ಅಲಂಕಾರ ಮಾಡಲಾಗಿತ್ತು. ಎರಡನೆಯ ದಿನ ಬ್ರಹ್ಮಚಾರಿಣಿ ಪೂಜೆ ಮಾಡಿ ಶ್ರೀ ದುರ್ಗಾಂಬಿಕಾದೇವಿಗೆ ವರಾಹಿ ಅಲಂಕಾರ ಮಾಡಿದ್ದೆವು. ಮೂರನೆಯ ದಿನ ಚಂದ್ರಘಂಟಾ ಪೂಜೆ ಹಾಗೂ ಸ್ಕಂದಮಾತಾ ಅಲಂಕಾರ ನಡೆಯಿತು. ನಾಲ್ಕನೆಯ ದಿನ ಕೂಷ್ಮಾಂಡಾ ಪೂಜೆಯನ್ನು ಮಾಡಿ, ವೈಷ್ಣವ ಅಲಂಕಾರ ಮಾಡಿದೆವು. ಐದನೆಯ ದಿನ ಸ್ಕಂದಮಾತಾ ಪೂಜೆ ಹಾಗೂ ಶ್ರೀ ಲಲಿತಾಪರಮೇಶ್ವರಿ ಅಲಂಕಾರ ಮಾಡಲಾಗಿತ್ತು. ಆರನೆಯ ದಿನ ಕಾತ್ಯಾಯಿನಿ ಪೂಜೆ ಹಾಗೂ ಶ್ರೀದುರ್ಗಾಂಬಿಕಾ ದೇವಿಗೆ ಮಹಾಲಕ್ಷ್ಮೀ ಅಲಂಕಾರ ಮಾಡಿದ್ದೆವು. ಏಳನೆಯ ದಿನ ಕಾಲರಾತ್ರಿ ಪೂಜೆ ಹಾಗೂ ಶ್ರೀರಾಜರಾಜೇಶ್ವರಿ ಅಲಂಕಾರವನ್ನು ದೇವಿಗೆ ಮಾಡಲಾಗಿತ್ತು. ಎಂಟನೆಯ ದಿನ ಶ್ರೀ ಮಹಾಗೌರಿ ಮತ್ತು ಶ್ರೀ ಶಾರದಮಾತೆ ಪೂಜೆ ಹಾಗೂ ಶ್ರೀ ಶಾರದಾ ಪರಮೇಶ್ವರಿ ಅಲಂಕಾರ ಮಾಡಲಾಗಿತ್ತು. ಒಂಬತ್ತನೆಯ ದಿನ ಸಿದ್ಧಿದಾತ್ರಿ ಪೂಜೆ ಮತ್ತು ಮಹಾಗೌರಿ ಅಲಂಕಾರವನ್ನು ನೋಡಬಹುದಾಗಿತ್ತು. ಅಂದು ಒಂಬತ್ತನೆಯ ದಿನ ಆಯುಧ ಪೂಜೆ ಮಾಡಲಾಯಿತು. ಅಕ್ಟೋಬರ್ 5 ವಿಜಯದಶಮಿ. ಶ್ರೀಚಾಮುಂಡೇಶ್ವರಿಯ ಪೂಜೆ ಮತ್ತು ವಿಜಯದುರ್ಗೆಯ ಅಲಂಕಾರ ಅಂದಿನ ವೈಶಿಷ್ಟ್ಯವಾಗಿತ್ತು.

ಭಾರತೀಯ ಅಧ್ಯಾತ್ಮಿಕ ಇತಿಹಾಸದಲ್ಲಿ ಒಂಬತ್ತು ಅಂದರೆ ನವಸಂಖ್ಯೆಗೆ ವಿಶೇಷವಾದ ಸ್ಥಾನವಿದೆ. ನವಧಾನ್ಯ, ನವರತ್ನ, ನವಗ್ರಹ, ನವಕೋಟಿ, ನವದ್ವಾರಗಳ ಪ್ರಾಮುಖ್ಯತೆ ಎಲ್ಲರಿಗೂ ತಿಳಿದ ವಿಚಾರ. ಮಹಿಷಾಸುರನ ಸಂಹಾರಕ್ಕಾಗಿ ತ್ರಿಮೂರ್ತಿಗಳು ಮತ್ತು ದೇವತೆಗಳು ತಮ್ಮೆಲ್ಲಾ ಶಕ್ತಿಯನ್ನು ಶ್ರೀ ದುರ್ಗಾಂಬಿಕಾದೇವಿಗೆ ನೀಡುತ್ತಾರೆ. ಆ ಕಾರಣದಿಂದಲೇ ನವರಾತ್ರಿ ಸಂದರ್ಭದಲ್ಲಿ ದೇವಿಯ ಆರಾಧನೆಗೆ ಇಷ್ಟೊಂದು ಮಹತ್ವ ಬಂದಿರುವುದು. ಈಗ ಯಾರು ನವದ್ವಾರಗಳನ್ನು ಮುಚ್ಚಿಕೊಂಡು ತಪಸ್ಸು ಆಚರಿಸಿ, ದೇವಿಯನ್ನು ಒಲಿಸಿಕೊಳ್ಳುತ್ತಾರೋ ಅವರಲ್ಲಿ ಚೈತನ್ಯ ಉಕ್ಕುತ್ತದೆ.

ನವರಾತ್ರಿ ಸಂದರ್ಭದಲ್ಲಿ ಶ್ರೀದುರ್ಗಾಂಬಿಕಾದೇವಿಯ ಆಲಯಕ್ಕೆ ಎರಡು ಹೊತ್ತು ನಡೆದ ಪೂಜಾ ಕಾರ್ಯಗಳಲ್ಲಿ ಸಂಸ್ಥೆಯ ಅಧ್ಯಕ್ಷರಾದ ಎಂ.ಆರ್. ಹುಲಿನಾಯ್ಕರ್, ಶ್ರೀಮತಿ ಶಾಂತಾದುರ್ಗಾದೇವಿ ಹುಲಿನಾಯ್ಕರ್, ಡಾ. ಭವಾನಿ, ಡಾ. ರಮಣ ಹುಲಿನಾಯ್ಕರ್, ಡಾ. ಲಾವಣ್ಯ ರಮಣ, ಡಾ. ಮನೋನ್ಮಣಿ, ಶ್ರೀಮತಿ ಅಂಬಿಕಾ ಪಾಟೀಲ್, ಮೊದಲಾದವರು ಆಗಮಿಸಿದ್ದರು. ನವರಾತ್ರಿ ಆಚರಣೆ ಶಾಸ್ತ್ರದ ಅನುಸಾರ ನಡೆಯಿತು.

**ನಿರೂಪಣೆ: ಕಮಲೇಶ್**



## ಶ್ರೀ ಶಂಭುಲಿಂಗೇಶ್ವರ ದೇವಸ್ಥಾನದಲ್ಲಿ ಕಾರ್ತಿಕ ಮಾಸದ ವಿಶೇಷ ಪೂಜೆ

ಶ್ರೀದೇವಿ ವಿದ್ಯಾಸಂಸ್ಥೆಯ ಆವರಣದಲ್ಲಿರುವ ಶ್ರೀ ಆದಿಶಕ್ತಿ ಶ್ರೀದುರ್ಗಾಂಬಿಕಾ ದೇವಸ್ಥಾನ ಹಾಗೂ ಶ್ರೀ ಶಂಭುಲಿಂಗೇಶ್ವರ ದೇವಸ್ಥಾನದಲ್ಲಿ ಕಾರ್ತಿಕ ಮಾಸದ ಕೊನೆ ಸೋಮವಾರದಂದು ವಿಶೇಷ ಹೂವಿನ ಅಲಂಕಾರದಿಂದ ಪೂಜೆ ನೆರವೇರಿಸಲಾಗಿತ್ತು. ನೂರಾರು ಭಕ್ತಧಿಗಳು ದೀಪಗಳನ್ನು ಬೆಳಗಿಸುವ ಮೂಲಕ ವಿಶೇಷವಾಗಿ ಪ್ರಾರ್ಥನೆ ಸಲ್ಲಿಸಿದರು. ಶ್ರೀ ಶಂಭುಲಿಂಗೇಶ್ವರ ಸ್ವಾಮಿಯ ಲಿಂಗವನ್ನು ಶಿವನ ಮೂರ್ತಿಗಳ ಆವಾಸ ಸ್ಥಾನ ಎಂದು ಖ್ಯಾತವಾಗಿರುವ ನರ್ಮದಾ ನದಿತೀರದಿಂದ ತರಲಾಗಿದೆ. ಶಂಭುಲಿಂಗೇಶ್ವರ ಸ್ವಾಮಿಯ ಎದುರಿಗಿರುವ ನಂದಿ ವಿಗ್ರಹ ಅತ್ಯಂತ ಆಕರ್ಷಕವಾಗಿದ್ದು ತಲಕಾಡಿನ ಗಂಗರ ವಾಸ್ತುಶಿಲ್ಪವನ್ನು ನೆನಪಿಸುತ್ತದೆ. ⌘

Printed and Published by **Shridevi Charitable Trust,** Lingapura,NH 4, Sira Road, Tumakuru - 572106, Mob: 94480 82844 and
Printed at **Maruthi Printing Press,** No.90/6-1. 1st cross, Vittal Nagar West, Near Marvel Apartment, Bengaluru-560026. Editor: **Ambika M Hulinaykar**